ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI VIJAYAPURA
ಭಾನುವಾರ 15 ಡಿಸೆಂಬರ್ 2019
15 DECEMBER 2019

# ಸುಭಾಷಿತ ಕಲಿಕೆಯಿಂದ ಮಕ್ಕಳ ವ್ಯಕ್ತಿತ್ವ ವಿಕಸನ

## ಸಿದ್ಧೇಶ್ವರ ಶ್ರೀಗಳ ಅಭಿಮತ



ವಿಜಯಪುರದ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ನಡೆದ ಸಂಸ್ಕೃತ ಸುಭಾಷಿತ ಸ್ಪರ್ಧೆ ಉದ್ಘಾಟನೆ ಸಮಾರಂಭದಲ್ಲಿ ಸಿದ್ಧೇಶ್ವರ ಸ್ವಾಮೀಜಿ, ರುದ್ರಮುನಿ ಸ್ವಾಮೀಜಿ, ಕೆ.ಜಿ. ಪೂಜಾರಿ ಮತ್ತಿತರರು ಇದ್ದರು.

■ ವಿಜಯವಾಣಿ ಸುದ್ದಿಜಾಲ ವಿಜಯಪುರ

ಒಳ್ಳೆಯ ಭಾಷೆಯನ್ನು ಸುಭಾಷಿತ ಎನ್ನುತ್ತೇವೆ. ಸಂಸ್ಕೃತದಲ್ಲಿ ಹಲವಾರು ಸುಭಾಷಿತಗಳಿದ್ದು, ಅವು ವ್ಯಕ್ತಿತ್ವ ರೂಪಿಸಿಕೊಳ್ಳಲು ಸಹಾಯಕವಾಗುತ್ತವೆ. ಮಕ್ಕಳಿಗೆ ಸುಭಾಷಿತ ಕಲಿಕೆ ಅಗತ್ಯವಿದೆ ಎಂದು ಸಿದ್ಧೇಶ್ವರ ಸ್ವಾಮೀಜಿ ಹೇಳಿದರು.

ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಸಂಸ್ಕೃತ ವಿಭಾಗ ಮತ್ತು ಸುಭಾಷಿತ ಬಳಗದ ಸಹಯೋಗದಲ್ಲಿ ಶಾಲೆ-ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ 'ಸಂಸ್ಕೃತ ಸುಭಾಷಿತ ಸ್ಪರ್ಧೆ' ಉದ್ಘಾಟನೆ ಸಮಾರಂಭದಲ್ಲಿ ಅವರು ಮಾತನಾಡಿದರು. ಸಂಸ್ಕೃತ ದೇವ ಭಾಷೆ ಎಂಬ ಖ್ಯಾತಿ ಪಡೆದಿದೆ.

**» ವಿದ್ಯಾರ್ಥಿಗಳಿಗಾಗಿ ಸಂಸ್ಕೃತ ಸುಭಾಷಿತ ಸ್ಪರ್ಧೆ**

ಎಲ್ಲ ಭಾಷೆಗಳಿಗೂ ಮೂಲ ಸಂಸ್ಕೃತವಾಗಿದೆ. ಅದೊಂದು ವಿಶಾಲ ಸರೋವರ. ಸಂಸ್ಕೃತ ಮಕ್ಕಳಲ್ಲಿ ಸಂಸ್ಕೃತಿ ಬೆಳೆಸಲಿದೆ. ಬಾಲ್ಯದಿಂದಲೇ ಮಕ್ಕಳಿಗೆ ಸಂಸ್ಕೃತ ವಿದ್ಯಾಭ್ಯಾಸ ಹೇಳಿಕೊಡುವ ಅಗತ್ಯವಿದೆ ಎಂದರು.

ಆಲಮಟ್ಟಿಯ ರುದ್ರಮುನಿ ಸ್ವಾಮೀಜಿ ಮಾತನಾಡಿದರು. ಬಿಎಲ್‌ಡಿಇ ಸಂಸ್ಥೆಯ ಆಡಳಿತಾಧಿಕಾರಿ ಕೆ.ಜಿ. ಪೂಜಾರಿ, ಸಾಂಸ್ಕೃತಿಕ ಮತ್ತು ಕ್ರೀಡಾ ವಿಭಾಗದ ಮುಖ್ಯಸ್ಥ ಪ್ರೊ.ಜಿ.ಆರ್. ಅಂಬಲಿ, ಪ್ರಾಚಾರ್ಯ ಎ.ಎಸ್. ಪೂಜಾರಿ, ಉಷಾ ಅಗರಖೇಡ ಹಾಗೂ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಇದ್ದರು. ಉಪನ್ಯಾಸಕಿ ಗೋನಾಳ ನಿರೂಪಿಸಿದರು. ದೀಪಕ ಅಗರಖೇಡ ವಂದಿಸಿದರು. ನಾಲ್ಕು ಸುತ್ತಿನಲ್ಲಿ ನಡೆದ ಸ್ಪರ್ಧೆಯಲ್ಲಿ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯ ಹಾಗೂ ತುಂಗಳ ಕಾಲೇಜು, ಜುಮನಾಳ ಸರ್ಕಾರಿ ಪ್ರೌಢಶಾಲೆ ಹಾಗೂ ಜಮಖಂಡಿ ತುಂಗಳ ಕಾಲೇಜು ವಿದ್ಯಾರ್ಥಿಗಳು ಅನುಕ್ರಮವಾಗಿ ಮೊದಲ ಮೂರು ಸ್ಥಾನ ಪಡೆದರು. ಭಗ್ಯವಪ್ಪ ಆಚಾರ್ಯ ನಿರ್ಣಾಯಕರಾಗಿ ಭಾಗವಹಿಸಿದ್ದರು. ವಿಜೇತರಿಗೆ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ ನೀಡಲಾಯಿತು.

Scanned with CamScanner

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರ • ಜುಲೈ 8, 2018

# ಅವಕಾಶ ಬಳಸಿ ಜ್ಞಾನ ವೃದ್ಧಿಸಿಕೊಳ್ಳಿ

## ವಿಶೇಷ ಉಪನ್ಯಾಸ ನೀಡಿದ ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಸಲಹೆ

ಪ್ರಜಾವಾಣಿ ವಾರ್ತೆ

ವಿಜಯಪುರ: ಸಂದರ್ಭ ಬಂದಾಗ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಅಭಿಮಾನಕ್ಕೆ ತುತ್ತಾಗಿ ನಿಮ್ಮ ಜ್ಞಾನವನ್ನು ಸಂಕುಚಿತಗೊಳಿಸಿಕೊಳ್ಳಬೇಡಿ ಎಂದು ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಹೇಳಿದರು.

ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ, ಐ.ಕ್ಯೂ.ಎ.ಸಿ ವತಿಯಿಂದ ಹಮ್ಮಿಕೊಂಡಿದ್ದ ವಚನಗಳು ಮತ್ತು ವ್ಯಕ್ತಿತ್ವ ವಿಕಸನ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವಚನ ಎನ್ನುವುದು ಸಾಹಿತ್ಯದ ಒಂದು ಪ್ರಕಾರ. ಸಾಹಿತ್ಯಕ್ಕೆ ಚೌಕಟ್ಟು ಎನ್ನುವುದಿಲ್ಲ. ಎಲ್ಲ ವಿಷಯಗಳಲ್ಲಿ ನಾವು ಸಾಹಿತ್ಯವನ್ನು ಕಾಣಬಹುದು. ಅದರ ವ್ಯಾಪ್ತಿ ಆಳವಾದುದು. ವಚನ ಸಾಹಿತ್ಯದಲ್ಲಿ ಎಲ್ಲ ವಿಶ್ವ ವಿದ್ಯಾಲಯಗಳಿಂದ 576 ಪಿಎಚ್.ಡಿ ನೀಡಲಾಗಿದೆ' ಎಂದರು.

'ಭಗವಂತನ ಇತಿಹಾಸ ತಿಳಿಯಬೇಕಾದರೆ ಸಾಧನೆ ಮಾಡಬೇಕು. ಅದಮ್ಯ, ಅಗೋಚರ, ವಿಜ್ಞಾನವನ್ನು ಅರ್ಥಮಾಡಿಕೊಂಡರೆ ವಚನಗಳಲ್ಲಿರುವ ಆತ್ಮಸಾಕ್ಷಿ ಪ್ರಜ್ಞೆ ತಿಳಿಯುತ್ತದೆ. ಜೀವನದಲ್ಲಿ ಯಶಸ್ಸು ಕಾಣಬೇಕಾದರೆ ಹಿಡಿದ ಗುರಿಯಿಂದ ಹಿಂದೆ ಸರಿಯಬಾರದು. ಕಲಿತ ಜ್ಞಾನ ಎಲ್ಲರ ಹೃದಯ, ಮನವನ್ನು ಮುಟ್ಟುವಂತಿರಬೇಕು. ಶರಣರ ಬಗ್ಗೆ ಜಾಗೃತಿ ಮೂಡಿಸಲು ದೇಶದ ಎಲ್ಲ ಗ್ರಂಥಾಲಯಗಳಲ್ಲಿ ವಚನ ಸಾಹಿತ್ಯ ಗ್ರಂಥಗಳಿರಬೇಕು' ಎಂದು ಹೇಳಿದರು.

ಪ್ರಾಚಾರ್ಯ ಡಾ.ಕೆ.ಜಿ.ಪೂಜಾರಿ, ಮಹಾಂತೇಶ ಬಿರಾದಾರ, ಸಂಗಮೇಶ್ವರ ಬಬಲೇಶ್ವರ ಉಪಸ್ಥಿತರಿದ್ದರು. ಉಪನ್ಯಾಸಕಿ ಜ್ಯೋತಿ ಕೋರಿ ಸ್ವಾಗತಗೀತೆ ಹಾಡಿದರು. ಪ್ರೊ. ಜಿ.ಆರ್. ಅಂಬಲಿ ಸ್ವಾಗತಿಸಿದರು. ಡಾ.ಎಸ್.ಟಿ.ಮೇರವಾಡೆ ನಿರೂಪಿಸಿದರು. ಡಾ.ಯು.ಎಸ್.ಪೂಜಾರಿ ವಂದಿಸಿದರು.



ವಿಜಯಪುರದ ಎಸ್‌.ಬಿ ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ನಡೆದ ವಚನಗಳು ಮತ್ತು ವ್ಯಕ್ತಿತ್ವ ವಿಕಸನ ವಿಷಯ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಮಾತನಾಡಿದರು

Scanned with CamScanner

ವಿಜಯ ಕರ್ನಾಟಕ



# ಸಂಗೀತಕ್ಕೆ ಸ್ವರ, ತಾಳಗಳು ಬೇಕು

**ವಿಕ ಸುದ್ದಿಲೋಕ** ವಿಜಯಪುರ

ಸತತ ಪರಿಶ್ರಮ, ಕಲೆಯ ಆರಾಧನೆಯಿಂದ ಸಂಗೀತ ವಿದ್ಯೆ ಪ್ರಾಪ್ತಿಯಾಗುತ್ತದೆ ಎಂದು ಖ್ಯಾತ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಾವಿದ ಫಯಾಜ್ ವಾಸಿಫುದ್ದೀನ್ ಡಾಗರ್ ಹೇಳಿದರು.

ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಕಾಲೇಜ್‌ನ ಸೆಮಿನಾರ್ ಹಾಲ್‌ನಲ್ಲಿ ಕಾಲೇಜ್‌ನ ಹಿರಿಯ ವಿದ್ಯಾರ್ಥಿಗಳ ಸಂಘ ಮತ್ತು ಸ್ಪಿಕ್ ಮ್ಯಾಕೆ ಆಶ್ರಯದಲ್ಲಿ ನಡೆದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂಗೀತ ಅನುವಂಶಿಕವಾಗಿ ಬರುವಂತಹದ್ದು, ಕೆಲವರು ಅಭ್ಯಾಸದ ಮೂಲಕ ಸಂಗೀತ ಕಲಿಯುತ್ತಾರೆ. ಸಂಗೀತದ ಕಲೆ ಜನರ ಮನ ಕಲಕುವಂತಿರಬೇಕು. ಸಂಗೀತದಲ್ಲಿ ಮುಖ್ಯವಾಗಿ ಸ್ವರ, ತಾಳಗಳು ಬೇಕು. ಸಂಗೀತದ ಬಗ್ಗೆ ಸಾಮವೇದದಲ್ಲಿ ಉಲ್ಲೇಖವಿದೆ. ಇದು ಪುರಾತನ ಕಲೆಯಾಗಿದ್ದು, ಮನುಷ್ಯ ದೇಹ, ಮನಸ್ಸು ಶಾಂತವಾಗಿರುತ್ತದೆ. ಐದು ನಿಮಿಷದ ಹಾಡು ಕೆಲವೊಮ್ಮೆ ಮುಗಿಯುವುದೇ ಇಲ್ಲ, ಕೆಲವೊಮ್ಮೆ ಮುಗಿದಿದ್ದು ತಿಳಿಯುವುದೇ ಇಲ್ಲ, ಕಾರಣ ನಾವು ಆಲಿಸುವ ರೀತಿ, ಮನಸ್ಥಿತಿಗೆ ಅನುಗುಣವಾಗಿರುತ್ತದೆ ಎಂದರು.

ಎಸ್.ಟಿ.ಮೇರವಾಡೆ, ಪ್ರೊ.ಆರ್. ಎಚ್.ಬದರಿ, ಎಸ್.ಜೆ.ಪವಾರ್, ಹಿಂದುಸ್ತಾನಿ ಶಾಸ್ತ್ರೀಯ ಸಂಗೀತಗಾರ ತುಷಾರ, ಪ್ರಮೋದ ಹಾಗೂ ಹಳೆಯ ವಿದ್ಯಾರ್ಥಿ ಡಾ.ಪ್ರಭುಗೌಡ. ಪಾಟೀಲ. ಮಹಾವಿದ್ಯಾಲಯದ ವಿದ್ಯಾರ್ಥಿಗಳು, ಬೋಧಕ, ಬೋಧಕೇತರ ಸಿಬ್ಬಂದಿ ಇದ್ದರು.



ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಕಾಲೇಜ್‌ನ ಸೆಮಿನಾರ್ ಹಾಲ್‌ನಲ್ಲಿ ಫಯಾಜ್ ವಾಸಿಫುದ್ದೀನ್ ಡಾಗರ್ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಜರುಗಿತು.

Scanned with CamScanner

# ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೋಮವಾರ • ಆಗಸ್ಟ್ 6, 2018


## ಮಕ್ಕಳ ಮೇಲೆ ಒತ್ತಡ ಹಾಕಬೇಡಿ: ಸಬಿಹಾ

ಪ್ರಜಾವಾಣಿ ವಾರ್ತೆ

ವಿಜಯಪುರ: 'ದೈಹಿಕ ಮತ್ತು ಮಾನಸಿಕ ಆರೋಗ್ಯದಿಂದ ವ್ಯಕ್ತಿತ್ವ ವಿಕಸನವಾಗುವುದು' ಎಂದು ಅಕ್ಕ ಮಹಾದೇವಿ ಮಹಿಳಾ ವಿಶ್ವ ವಿದ್ಯಾಲಯದ ಕುಲಪತಿ ಪ್ರೊ.ಸಬಿಹಾ ಭೂಮಿಗೌಡ ಹೇಳಿದರು.

ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ. ಕಲಾ ಹಾಗೂ ಕೆ.ಸಿ. ಪಿ ವಿಜ್ಞಾನ ಕಾಲೇಜಿನಲ್ಲಿ ಶನಿವಾರ ಹಮ್ಮಿಕೊಂಡಿದ್ದ 2018-19ನೇ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ದೈಹಿಕ ಆರೋಗ್ಯಕ್ಕೆ ವೈದ್ಯರು ಇದ್ದಾರೆ. ಆದರೆ, ಮಾನಸಿಕ ಆರೋಗ್ಯಕ್ಕೆ ವೈದ್ಯರಿಲ್ಲ. ಮಾನಸಿಕವಾಗಿ ಆರೋಗ್ಯವಂತರಾಗಲು ಯೋಗ, ವ್ಯಾಯಾಮ, ಉತ್ತಮ ಪರಿಸರದ ಪಾತ್ರ ಪ್ರಮುಖ. ಆರೋಗ್ಯದ ಬಗ್ಗೆ ಮೂಲಭೂತ ದೃಷ್ಟಿಕೋನಗಳು ಬದಲಾಗಬೇಕಿದೆ. ಸಮಾಜ ಚಿಕ್ಕ ಮಕ್ಕಳನ್ನು ಅಂಕ ಗಳಿಕೆ ಎಂಬ ಒತ್ತಡಕ್ಕೆ ಸಿಲುಕಿಸುತ್ತಿದೆ. ಇದರಿಂದ ಮಕ್ಕಳ ಜೀವನಕ್ಕೆ ಕುತ್ತು ತರುತ್ತಿದ್ದೇವೆ. ಏಳು-ಬೀಳುಗಳು ಜೀವನದಲ್ಲಿ ಸಹಜ. ನೋಡುವ ದೃಷ್ಟಿಕೋನಗಳು ಮಾತ್ರ ಸಂಕುಚಿತವಾಗಿವೆ ಎಂದರು.

ಪ್ರಾಚಾರ್ಯ ಡಾ.ಕೆ.ಪೂಜಾರಿ. ಅಮೃತಾನಂದ ಸ್ವಾಮೀಜಿ, ಜಿ.ಆರ್. ಅಂಬಲಿ. ಎಸ್.ಬಿ.ಪಾಟೀಲ. ಯು.ಎಸ್. ಪೂಜಾರಿ, ಎಸ್.ಟಿ.ಮೇರವಾಡೆ, ಕುಂಚರಾಣಿ ತೇಲಿ ಇದ್ದರು. ಜ್ಯೋತಿ ಕೋರಿ ಸ್ವಾಗತ ಗೀತೆ ಹಾಡಿದರು.

Scanned with CamScanner

# ವಿಜಯವಾಣಿ

ಕನ್ನಡಿಗರ ಧ್ವನಿ

ಸೋಮವಾರ 6 ಆಗಸ್ಟ್ 2018


## ಸೋಲು ಗೆಲುವು ಸಹಜ

**ವಿಜಯಪುರ:** ದೈಹಿಕ ಮತ್ತು ಮಾನಸಿಕ ಆರೋಗ್ಯದಿಂದ ವ್ಯಕ್ತಿತ್ವ ವಿಕಸನವಾಗುತ್ತದೆ ಎಂದು ಅಕ್ಕ ಮಹಾದೇವಿ ವಿವಿ ಉಪ ಕುಲಪತಿ ಪ್ರೊ. ಸಬಿಹಾ ಭೂಮಿಗೌಡ ಹೇಳಿದರು.

ಇಲ್ಲಿಯ ಬಿಎಲ್‌ಡಿಇ ಸಂಸ್ಥೆಯ ಎಸ್.ಬಿ. ಕಲಾ ಹಾಗೂ ಕೆ.ಸಿ.ಪಿ ವಿಜ್ಞಾನ ಕಾಲೇಜಿನಲ್ಲಿ ಈಚೆಗೆ ಹಮ್ಮಿಕೊಂಡಿದ್ದ 2018-19ನೇ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಜೀವನದಲ್ಲಿ ಸೋಲು-ಗೆಲುವು ಸಹಜ. ಅವುಗಳನ್ನು ಸವಾಲಾಗಿ ಸ್ವೀಕರಿಸಿದಾಗ ಮಾತ್ರ ಯಶಸ್ಸು ಗಳಿಸಲು ಸಾಧ್ಯವಾಗುತ್ತದೆ ಎಂದರು. ಅಮೃತಾನಂದಶ್ರೀ ಸಾನ್ನಿಧ್ಯ ವಹಿಸಿದ್ದರು. ಪ್ರಾಚಾರ್ಯ ಡಾ.ಕೆ. ಪೂಜಾರಿ, ಜಿ.ಆರ್.ಅಂಬಲಿ. ಎಸ್. ಬಿ.ಪಾಟೀಲ, ಯು.ಎಸ್. ಪೂಜಾರಿ, ಎಸ್.ಟಿ. ಮೇರವಾಡೆ ಇದ್ದರು.



ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಎಸ್.ಬಿ. ಕಲಾ ಹಾಗೂ ಕೆ.ಸಿ.ಪಿ ವಿಜ್ಞಾನ ಕಾಲೇಜಿನಲ್ಲಿ ಈಚೆಗೆ ಹಮ್ಮಿಕೊಂಡಿದ್ದ 2018-19ನೇ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆ ಕಾರ್ಯಕ್ರಮವನ್ನು ಮಹಿಳಾ ವಿವಿ ಉಪ ಕುಲಪತಿ ಪ್ರೊ.ಸಬಿಹಾ ಉದ್ಘಾಟಿಸಿದರು.

Scanned with CamScanner

ಕನ್ನಡಪ್ರಭ
ಸೋಮವಾರ 6.8.2018

# ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳ ಉದ್ಘಾಟನಾ ಸಮಾರಂಭಕ್ಕೆ ಚಾಲನೆ



ವಿಜಯಪುರದ ಎಸ್.ಬಿ. ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಜರುಗಿದ ಸಮಾರಂಭವನ್ನು ಮಹಿಳಾ ವಿ.ವಿ. ಕುಲಪತಿ ಡಾ.ಸಬೀಹಾ ಉದ್ಘಾಟಿಸಿದರು.

• **ಕನ್ನಡಪ್ರಭ ವಾರ್ತೆ** ವಿಜಯಪುರ

ಆರೋಗ್ಯದ ಬಗ್ಗೆ ಮೂಲಭೂತ ದೃಷ್ಟಿಕೋನಗಳು ಬದಲಾಗಬೇಕಿದೆ. ದೈಹಿಕವಾಗಿ ಸದೃಢರಾಗಿದ್ದರೂ ಇಂದು ಮಾನಸಿಕವಾಗಿ ಪುಕ್ಕಲತನ ಯಥೇಚ್ಛವಾಗಿ ಕಂಡುಬರುತ್ತಿರುವುದು ದುರ್ದೈವ ಎಂದು ಅಕ್ಕ ಮಹಾದೇವಿ ವಿಶ್ವವಿದ್ಯಾಲಯ ಕುಲಪತಿ ಪ್ರೊ. ಸಬಿಹಾ ಭೂಮಿಗೌಡ ಹೇಳಿದರು.

ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ. ಕಲಾ ಹಾಗೂ ಕೆ.ಸಿ.ಪಿ ವಿಜ್ಞಾನ ಕಾಲೇಜಿನಲ್ಲಿ ನಡೆದ 2018-19ನೇ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಉದ್ಘಾಟನೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ದೈಹಿಕ ಆರೋಗ್ಯಕ್ಕೆ ವೈದ್ಯರು ಇದ್ದಾರೆ. ಆದರೆ ಮಾನಸಿಕ ಆರೋಗ್ಯಕ್ಕೆ ವೈದ್ಯರೇ ಇಲ್ಲ. ದೈಹಿಕ ಮತ್ತು ಮಾನಸಿಕ ಆರೋಗ್ಯದಿಂದ ವ್ಯಕ್ತಿತ್ವ ವಿಕಸನವಾಗುವುದು. ಮಾನಸಿಕವಾಗಿ ಆರೋಗ್ಯವಂತರಾಗಲು ಯೋಗ, ವ್ಯಾಯಾಮ, ಉತ್ತಮ ಪರಿಸರ ಪಾತ್ರ ಪ್ರಮುಖ ಎಂದು ಹೇಳಿದರು. ಅಮೃತಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಪ್ರಾಚಾರ್ಯ ಡಾ.ಕೆ.ಪೂಜಾರಿ, ಪ್ರೊ.ಜೆ.ಆರ್.ಅಂಬಲಿ. ಎಸ್.ಬಿ.ಪಾಟೀಲ. ಯು.ಎಸ್.ಪೂಜಾರಿ. ಡಾ. ಎಸ್.ಟಿ.ಮೇರವಾಡೆ, ವಿದ್ಯಾರ್ಥಿ ಪ್ರತಿನಿಧಿ ಕುಂಚರಾಣಿ ತೇಲಿ, ಜ್ಯೋತಿ ಕೋರಿ ಇದ್ದರು.

Scanned with CamScanner

3
ಉದಯವಾಣಿ
ಸೋಮವಾರ, ಆಗಸ್ಟ್ 6, 2018

# ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಆರೋಗ್ಯ ಮುಖ್ಯ

**ವಿಜಯಪುರ:** ದೈಹಿಕ, ಮಾನಸಿಕವಾಗಿ ಆರೋಗ್ಯವಾಗಿದ್ದಲ್ಲಿ ಸಮಗ್ರ ವ್ಯಕ್ತಿತ್ವ ವಿಕಸನ ಸಾಧ್ಯ. ಆರೋಗ್ಯದ ಬಗೆಗೆ ಮೂಲಭೂತ ದೃಷ್ಟಿಕೋನಗಳು ಬದಲಾಗಬೇಕಿದೆ ಎಂದು ಅಕ್ಕಮಹಾದೇವಿ ವಿಶ್ವವಿದ್ಯಾಲಯ ಕುಲಪತಿ ಪ್ರೊ| ಸಬಿಹಾ ಭೂಮಿಗೌಡ ಹೇಳಿದರು.

ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌.ಬಿ. ಕಲಾ ಹಾಗೂ ಕೆ.ಸಿ.ಪಿ ವಿಜ್ಞಾನ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಪ್ರಸಕ್ತ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಾನಸಿಕವಾಗಿ ಆರೋಗ್ಯವಂತರಾಗಲು ಯೋಗ, ವ್ಯಾಯಾಮ, ಉತ್ತಮ ಪರಿಸರ ಪಾತ್ರ ಪ್ರಮುಖ ಎಂದರು.



**ವಿಜಯಪುರ: ನಗರದ ಎಸ್‌ಬಿ ಕಲಾ-ಕೆಸಿಪಿ ವಿಜ್ಞಾನ ಕಾಲೇಜಿನ ಶೈಕ್ಷಣಿಕ ಸಾಂಸ್ಕೃತಿಕ-ಕ್ರೀಡಾ ಚಟುವಟಿಕೆಗಳಿಗೆ ಚಾಲನೆ ನೀಡಿ ಡಾ| ಸಬೀಹಾ ಭೂಮಿಗೌಡ ಮಾತನಾಡಿದರು.**

ಪ್ರಸ್ತುತ ಸಂದರ್ಭದಲ್ಲಿ ವಿದ್ಯಾರ್ಥಿಗಳೇ ಸಮಾಜದ ಓರೆ-ಕೋರೆ ತಿದ್ದುವ ರೂವಾರಿಗಳು, ನೇತಾರರು ವಿದ್ಯಾರ್ಥಿಗಳು. ಸಮಾಜದ ಸ್ವಾಸ್ಥ ಕಾಪಾಡುವ ನಿಮ್ಮ ಪಾತ್ರ ಪ್ರಮುಖ. ಸಮಾಜದ ರಾಜಕೀಯ ವರ್ತಮಾನ ತಿಳಿಸುವಲ್ಲಿ ಮಾಧ್ಯಮಗಳ ಪಾತ್ರ ಪ್ರಮುಖ. ಕ್ರೀಡೆ ಸಾಹಿತ್ಯ ವ್ಯಕ್ತಿತ್ವ ವಿಕಸನವನ್ನು ಗುರುತಿಸುವ ಹೆದ್ದಾರಿಯಾಗಿವೆ. ಇಂದಿನ ದಿನಗಳಲ್ಲಿ ಮೊಬೈಲ್ ಎಂಬ ಜಾಲವನ್ನು ಆಧುನಿಕ ಅನಿಷ್ಟಗಳನ್ನು ಹರಡಲು ಬಳಸಿಕೊಳ್ಳುತ್ತಿದ್ದಾರೆ ಎಂದು ವಿಷಾದಿಸಿದರು.

ಅಮೃತಾನಂದ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು. ಪ್ರಾಚಾರ್ಯ ಡಾ| ಕೆ.ಪೂಜಾರಿ, ಪ್ರೊ| ಜಿ.ಆರ್. ಅಂಬಲಿ, ಎಸ್‌.ಬಿ. ಪಾಟೀಲ. ಯು.ಎಸ್. ಪೂಜಾರಿ, ಡಾ| ಎಸ್‌.ಟಿ. ಮೇರವಾಡೆ, ವಿದ್ಯಾರ್ಥಿ ಪ್ರತಿನಿಧಿ ಕುಂಚರಾಣಿ ತೇಲಿ, ಜ್ಯೋತಿ ಕೋರಿ ಇದ್ದರು.

Scanned with CamScanner

ಹೊಸ ದಿಗಂತ

ಸೋಮವಾರ
6 ಆಗಸ್ಟ್ 2018

ಮಹಿಳಾ ವಿವಿ ಕುಲಪತಿ ಪ್ರೊ.ಸಬಿಹಾ ಭೂಮಿಗೌಡ ಹೇಳಿಕೆ

# ದೈಹಿಕ-ಮಾನಸಿಕ ಆರೋಗ್ಯದಿಂದ ವ್ಯಕ್ತಿತ್ವ ವಿಕಸನ

ದಿಗಂತ ಚಿತ್ರ




ದಿಗಂತ ವರದಿ: ವಿಜಯಪುರ, ಆ. 5

ದೈಹಿಕ ಮತ್ತು ಮಾನಸಿಕ ಆರೋಗ್ಯದಿಂದ ವ್ಯಕ್ತಿತ್ವ ವಿಕಸನವಾಗುವುದು ಎಂದು ಅಕ್ಕ ಮಹಾದೇವಿ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಸಬಿಹಾ ಭೂಮಿಗೌಡ ಹೇಳಿದರು.

ಇಲ್ಲಿಯ ಬಿಎಲ್‌ಡಿಇ ಸಂಸ್ಥೆಯ ಎಸ್.ಬಿ. ಕಲಾ ಹಾಗೂ ಕೆ.ಸಿ.ಪಿ ವಿಜ್ಞಾನ ಕಾಲೇಜನಲ್ಲಿ ಹಮ್ಮಿಕೊಂಡ 2018-19ನೇ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ದೈಹಿಕ ಆರೋಗ್ಯಕ್ಕೆ ವೈದ್ಯರು ಇದ್ದಾರೆ. ಆದರೆ ಮಾನಸಿಕ ಆರೋಗ್ಯಕ್ಕೆ ವೈದ್ಯರೆ ಇಲ್ಲ, ಮಾನಸಿಕವಾಗಿ ಆರೋಗ್ಯವಂತರಾಗಲು ಯೋಗ, ವ್ಯಾಯಾಮ,ಉತ್ತಮ ಪರಿಸರ ಪಾತ್ರ ಪ್ರಮುಖ ಎಂದರು. ಆರೋಗ್ಯದ ಬಗೆಗೆ ಮೂಲಭೂತ ದೃಷ್ಟಿಕೋನಗಳು ಬದಲಾಗ ಬೇಕಿದೆ. ದೈಹಿಕವಾಗಿ ಸದೃಢರಾಗಿದ್ದರು ಮಾನಸಿಕವಾಗಿ ಪುಕ್ಕಲರಾಗಿದ್ದೆ ಎಂದರು.

ಸಮಾಜ ಚಿಕ್ಕ ಮಕ್ಕಳನ್ನು ಅಂಕ ಗಳಿಕೆ ಎಂಬ ಒತ್ತಡಕ್ಕೆ ಸಿಲುಕಿಸುತ್ತಿದೆ. ಇದರಿಂದ ಮಕ್ಕಳ ಜೀವನಕ್ಕೆ ಕುತ್ತು ತರುತ್ತಿದ್ದೆವೆ. ಸೋಲು ಸಹಜ ಎಂದು ಭಾವಿಸಬೇಕು. ಏಳು-ಬೀಳುಗಳು ಜೀವನದಲ್ಲಿ ಸಹಜ. ನೋಡುವ ದೃಷ್ಟಿಕೋನಗಳು ಮಾತ್ರ ಸಂಕುಚಿತವಾಗಿವೆ ಎಂದರು.

ಸಮಾಜದ ಅಗಲ ಓರೆ-ಕೋರೆಗಳನ್ನು ತಿದ್ದುವ ರೂವಾರಿಗಳು ನೇತಾರರು ವಿದ್ಯಾರ್ಥಿಗಳು. ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ನಿಮ್ಮ ಪಾತ್ರ ಪ್ರಮುಖ. ಸನಾಜದ ರಾಜಕೀಯ ವರ್ತಮಾನಗಳನ್ನು ತಿಳಿಸುದರಲ್ಲಿ ಪತ್ರಿಕೆ ಹಾಗೂ ಟಿವಿ ಗಳ ಪಾತ್ರ ಪ್ರಮುಖ. ಕ್ರೀಡೆ ಸಾಹಿತ್ಯ ವ್ಯಕ್ತಿತ್ವ ವಿಕಸನವನ್ನು ಗುರುತಿಸುವ ಹೆದ್ದಾರಿ. ಇಂದಿನ ದಿನಗಳಲ್ಲಿ ಮೊಬೈಲ್ ಎಂಬ ಜಾಲವನ್ನು ಆಧುನಿಕ ಅನಿಷ್ಟಗಳನ್ನು ಹರಡಲು ಬಳಸಿಕೊಳ್ಳುತ್ತಿದ್ದಾರೆ. ಇದರಿಂದ ಹೆಚ್ಚು ಲೈಂಗಿಜತೆ ಬಿಂಬಿಸುವಂತಾಗಿದೆ. ಹೀಗೆ ನಾವು ದಿನನಿತ್ಯ ಪುಟ್ಟ ಮಕ್ಕಳ ಮೇಲೆ ದೌರ್ಜನ್ಯಗಳನ್ನು ನೋಡವಂತಾಗಿದೆ ಎಂದರು.

ಕಾಲೇಜಿನ ಪ್ರಾಚಾರ್ಯ ಡಾ.ಕೆ. ಪೂಜಾರಿ. ಅಮೃತಾನಂದ ಸ್ವಾಮೀಜಿ. ಜೆ.ಆರ್. ಅಂಬಲಿ. ಎಸ್.ಬಿ.ಪಾಟೀಲ. ಯು.ಎಸ್.ಪೂಜಾರಿ. ಎಸ್ .ಟಿ. ಮೇರವಾಡೆ ವಿದ್ಯಾರ್ಥಿ ಪ್ರತಿನಿಧಿ ಕುಂಚರಾಣಿ ತೇಲಿ ಇದ್ದರು. ಜ್ಯೋತಿ ಕೋರಿ ಪ್ರಾರ್ಥಿಸಿದರು.

Scanned with CamScanner

ವಿಜಯವಾಣಿ

12 ಆಗಸ್ಟ್ 2018 | ಭಾನುವಾರ

# ಯುವಜನರು ನವ ಭಾರತದ ಸಂಪತ್ತು

## ಡಿಎಸ್‌ಪಿ ಅಶೋಕ ಹೇಳಿಕೆ | ಎಸ್‌ಬಿ ಕಲಾ, ಕೆಸಿಪಿ ಕಾಲೇಜಿನಲ್ಲಿ ಜಾಗೃತಿ ಕಾರ್ಯಕ್ರಮ

■ ವಿಜಯವಾಣಿ ಸುದ್ದಿಜಾಲ ವಿಜಯಪುರ

ಯುವ ಜನರು ದೇಶದ, ಭವಿಷ್ಯದ ಸಂಪತ್ತು. ಅವರನ್ನು ಜೋಪಾನವಾಗಿ ಕಾಪಾಡಿ ಅವರಿಗೆ ಗುಣಮಟ್ಟದ ಮತ್ತು ಮೌಲ್ಯಾಧಾರಿತ ಶಿಕ್ಷಣ ನೀಡುವುದು ಪ್ರತಿಯೊಬ್ಬ ಪಾಲಕನ ಕರ್ತವ್ಯ ಎಂದು ಡಿಎಸ್‌ಪಿ ಡಿ. ಅಶೋಕ ಹೇಳಿದರು.

ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಪ್ರಾದೇಶಿಕ ಸಾರಿಗೆ ಇಲಾಖೆ ಹಾಗೂ ಆಹೇರಿ ಬಸವೇಶ್ವರ ಕರ್ಮವೀರ ಕಲಾ, ಸಾಹಿತ್ಯ, ಸಂಸ್ಕೃತಿ ವೇದಿಕೆ ಸಂಯುಕ್ತ ಆಶ್ರಯದಲ್ಲಿ ವ್ಯಸನ ಮುಕ್ತ ದಿನಾಚರಣೆ ಅಂಗವಾಗಿ ಮದ್ಯಪಾನ ಮತ್ತು ಮಾದಕ ಸೇವನೆಗಳಿಂದಾಗುವ ದುಷ್ಪರಿಣಾಮಗಳು ಮತ್ತು ರಸ್ತೆ ಸುರಕ್ಷತೆ ಕುರಿತು ಶನಿವಾರ ಏರ್ಪಡಿಸಿದ್ದ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಆಧುನಿಕ ಯುಗದಲ್ಲಿ ಪಾಲಕರು ಮಕ್ಕಳನ್ನು ರಾಷ್ಟ್ರದ ಮುಂದಿನ ಜವಾಬ್ದಾರಿಯುತ ನಾಗರಿಕರನ್ನಾಗಿ ನಿರ್ಮಿಸಬೇಕು. ಸಮಾಜದಲ್ಲಿ ಬಹುತೇಕ ವಿದ್ಯಾರ್ಥಿಗಳು ಮತ್ತು ಯುವ ಜನರು ದುಃಶ್ಚಟಗಳಿಗೆ ಬಲಿಯಾಗಿ ತಮ್ಮ ಅಮೂಲ್ಯವಾದ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಮದ್ಯಪಾನ ಮಾದಕ ಸೇವನೆಗಳಿಗೆ ಯುವ ಜನರು ಬಲಿಯಾಗುತ್ತಿದ್ದಾರೆ. ಆದ್ದರಿಂದ ಯುವ ಜನರು ದುಶ್ಚಟಗಳಿಗೆ ಬಲಿಯಾಗದೆ ತಂದೆ, ತಾಯಿಗಳ ಮತ್ತು ಸಮಾಜದ ಋಣವನ್ನು ತೀರಿಸುವ, ದೇಶದ ಸರ್ವಾಂಗೀಣ ಅಭಿವೃದ್ಧಿಗೆ ದುಡಿಯಬೇಕು ಎಂದರು.



ವಿಜಯವಾಣಿ ಚಿತ್ರ

ವ್ಯಸನಮುಕ್ತ ದಿನಾಚರಣೆ ಅಂಗವಾಗಿ ಶನಿವಾರ ಏರ್ಪಡಿಸಿದ್ದ ಜಾಗೃತಿ ಕಾರ್ಯಕ್ರಮವನ್ನು ಡಿಎಸ್‌ಪಿ ಡಿ. ಅಶೋಕ ಉದ್ಘಾಟಿಸಿದರು.

ಅಲ್-ಅಮೀನ್ ಮೆಡಿಕಲ್ ಕಾಲೇಜಿನ ನಿರ್ದೇಶಕ ಡಾ. ಬಿ.ಎಸ್. ಪಾಟೀಲ ಮಾತನಾಡಿ, ಯುವಲರು ಮಾದಕ ವ್ಯಸನಗಳಿಗೆ ಬಲಿಯಾಗದೆ ಜನ್ಮ ನೀಡಿದ ತಂದೆ, ತಾಯಿಗಳ ಮತ್ತು ಸಮಾಜದ ಋಣ ತೀರಿಸಲು ಮುಂದಾಗಬೇಕು ಎಂದರು.

ಉದ್ಯಮಿ ಡಿ.ಎಸ್. ಗುಡ್ಡೋಡಗಿ, ಡಾ. ಮಂಜುನಾಥ ಮಸಳಿ, ರವಿ ಕಿತ್ತೂರ, ಬಂಡೆಪ್ಪ ತೇಲಿ, ಡಾ. ಕೆ.ಜಿ. ಪೂಜಾರಿ, ಡಾ. ಯು.ಎಸ್. ಪೂಜಾರಿ, ಆರ್.ಎಚ್. ಬಿದರಿ, ಡಾ. ಎಸ್.ಜಿ. ಪವಾರ, ಎಂ.ಜಿ. ಯಂಕಂಚಿ, ಎಸ್.ಟಿ. ಮೆರವಡೆ, ಎಸ್.ಎನ್. ಪೂಜಾರ, ಚೇತನ ಪಟ್ಟಣಶೆಟ್ಟಿ, ಸಂಜೀವ ಮೆಟಗಾರ ಮತ್ತಿತರರು ಉಪಸ್ಥಿತರಿದ್ದರು.

Scanned with CamScanner

ಸಂಸ್ಕೃತೋತ್ಸವಕ್ಕೆ ಚಾಲನೆ

# ಸಂಸ್ಕೃತವೂ ಜಗತ್ತಿನ ಶ್ರೇಷ್ಠ ಭಾಷೆ: ಸಿದ್ದೇಶ್ವರ ಶ್ರೀ

## ■ ವಿದ್ಯಾರ್ಥಿಗಳು ಮೊಬೈಲ್ ದೂರವಿರಿಸಿ ಅಧ್ಯಯನದ ಕಡೆ ಗಮನ ಹರಿಸಲಿ: ಭಾಸ್ಕರಾಚಾರ್ಯ



ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯಲ್ಲಿ ಏರ್ಪಡಿಸಲಾಗಿದ್ದ ಸಂಸ್ಕೃತೋತ್ಸವಕ್ಕೆ ಗಣ್ಯರು ಚಾಲನೆ ನೀಡಿದರು.

ವಿಜಯಪುರ: ಜಗದ ಭಾಷೆಯಾಗಿರುವ ಸಂಸ್ಕೃತ ಜಗತ್ತಿಗೆ ಶ್ರೇಷ್ಠ ಭಾಷೆಗಳಲ್ಲಿ ಸಂಸ್ಕೃತವು ಒಂದಾಗಿದೆ ಎಂದು ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮಿಗಳು ಹೇಳಿದರು.

ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌.ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯದಲ್ಲಿ ಸಂಸ್ಕೃತ ವಿಭಾಗದಿಂದ ಹಮ್ಮಿಕೊಂಡಿದ್ದ ಸಂಸ್ಕೃತೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಆಶೀರ್ವಚನ ನೀಡಿ ಮಾತನಾಡಿದ ಅವರು, ಸಂಸ್ಕೃತ ಭಾಷೆ ಅತ್ಯಂತ ಶ್ರೇಷ್ಠ ಭಾಷೆ, ಶ್ರೀಮಂತ ಭಾಷೆ. ಈ ಭಾರತದ ಶಕ್ತಿ ಸಂಪತ್ತು ಅಪಾರವಾದದ್ದು. ಭಾರತದ ಎಲ್ಲ ಭಾಷೆಗಳಿಗೂ ಕಾಣಿಕೆ ಕೊಟ್ಟ ಭಾಷೆ ಸಂಸ್ಕೃತ. ಸಂಸ್ಕೃತ ಭಾಷೆಯನ್ನು ಪ್ರತಿಯೊಬ್ಬರು ಕಲಿಯುವ ಪ್ರಯತ್ನ ಮಾಡಬೇಕು ಎಂದರು.

ಸಂಸ್ಕೃತ ಭಾಷೆಯ ಬಗ್ಗೆ ವಿದೇಶಗಳಲ್ಲಿಯೂ ಒಲವು ಬೆಳೆಯುತ್ತಿದೆ. ವಿದೇಶಿಗರಲ್ಲಿ ಅನೇಕರು ಸಂಸ್ಕೃತ ಭಾಷೆಯ ಮಹತ್ವವನ್ನು ಅರಿತುಕೊಂಡಿದ್ದಾರೆ. ಅವರು ಸಹ ಸಂಸ್ಕೃತ ಕಲಿಯುತ್ತಿದ್ದಾರೆ. ಅನೇಕರು ಸಂಸ್ಕೃತ ಕಲಿಯಲು ಉತ್ಸುಕರಾಗಿದ್ದಾರೆ. ಫ್ರಾನ್ಸ್, ಜರ್ಮನ್ ದೇಶಗಳಲ್ಲಿಯೂ ಸಂಸ್ಕೃತವಿದೆ. ಎಲ್ಲ ಭಾಷೆಗಳು ಜಗತ್ತಿನ ಭಾಷೆಗಳು. ಎಲ್ಲ ಭಾಷೆಗಳಲ್ಲಿ ಒಂದೊಂದು ವೈಶಿಷ್ಟ್ಯವಿದೆ. ತಲೆಯ ಭಾಷೆಯನ್ನು ತಲೆಗಾಗಿ ಬಳಸುವುದು. ಹೃದಯದ ಭಾಷೆಯನ್ನು ಜೀವನಕ್ಕಾಗಿ ಬಳಸುವುದು. ಸಂಸ್ಕೃತ ಭಾಷೆಯ ಭಾವ ಎಲ್ಲರಿಗೂ ತಿಳಿಯುವಂತಹದ್ದು ಎಂದು ವಿವರಿಸಿದರು.

ಒಂದು ಕಾಲದಲ್ಲಿ ವಿಜಯಪುರ ವಿದ್ವಾಂಸರ ಆಗರವಾಗಿತ್ತು. ಶ್ರೇಷ್ಠ ಗಣಿತಜ್ಞ, ಖಗೋಳ ತಜ್ಞ ಭಾಸ್ಕರಾಚಾರ್ಯ ಈ ಭಾಗದವರು. ಹಿಂದಿನ ದಿನಗಳಲ್ಲಿ ವಿಜಯಪುರ ಸಂಸ್ಕೃತ ಭಾಷೆಗೆ ಪ್ರಸಿದ್ಧಿ ಪಡೆದಿತ್ತು. ಸಂಸ್ಕೃತದಿಂದ ದುರ್ಗುಣಗಳು ಮರೆಯಾಗುತ್ತವೆ. ವಿದ್ಯಾರ್ಥಿಗಳು ಮೊಬೈಲ್‌ನ್ನು ದೂರವಿರಿಸಿ ಅಧ್ಯಯನದ ಕಡೆ ಗಮನ ಕೊಡಬೇಕು. ಮೊಬೈಲ್‌ನಿಂದ ಅಧ್ಯಯನದ ಸಮಯ ವ್ಯರ್ಥವಾಗಿ ವ್ಯಯವಾಗುತ್ತದೆ. ಮೊಬೈಲ್ ದೂರವಿರಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಪಂ.ಮಧ್ವಾಚಾರ್ಯ ಮೊಕಾಶಿ ಮಾತನಾಡಿದರು. ಪ್ರಾಚಾರ್ಯ ಡಾ.ಕೆ.ಜಿ.ಪೂಜಾರಿ, ಬಿಎಲ್‌ಡಿಇ ಸಂಸ್ಥೆಯ ಆಡಳಿತಾಧಿಕಾರಿ ಪ್ರೊ.ಎಸ್‌.ಎಚ್‌.ಲಗಳಿ, ಪ್ರೊ.ಜೆ.ಆರ್‌.ಅಂಬಲಿ, ಡಾ.ಯು.ಎಸ್‌.ಪೂಜಾರಿ, ಡಾ.ಎಸ್‌.ಟಿ.ಮೇರವಾಡೆ, ಸವಿತಾ ಕೋನೂರ, ಜ್ಯೋತಿ ಕೋರಿ ಇದ್ದರು.

ವಿಜಯಪುರ
ಉದಯವಾಣಿ
ಶುಕ್ರವಾರ, ಆಗಸ್ಟ್ 31, 2018
3

Scanned with CamScanner

ವಿಜಯಪುರ

ಸಂಯುಕ್ತ ಕರ್ನಾಟಕ

4 ಶುಕ್ರವಾರ, 31, ಆಗಸ್ಟ್, 2018, ಹುಬ್ಬಳ್ಳಿ

# 'ಸಂಸ್ಕೃತ' ಅತ್ಯಂತ ಶ್ರೇಷ್ಠ ಭಾಷೆ: ಸಿದ್ಧೇಶ್ವರ ಶ್ರೀಗಳು

ಸಂ.ಕ ಸಮಾಚಾರ ವಿಜಯಪುರ

ಸಂಸ್ಕೃತ ಭಾಷೆ ಜನಭಾಷೆ. ಜಗತ್ತಿಗೆ ಶ್ರೇಷ್ಠ ಭಾಷೆಗಳಲ್ಲಿ ಸಂಸ್ಕೃತವು ಒಂದು ಎಂದು ಜ್ಞಾನಯೋಗಾಶ್ರಮದ ಸಿದ್ಧೇಶ್ವರ ಮಹಾಸ್ವಾಮಿಗಳು ಹೇಳಿದರು.

ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಸಂಸ್ಕೃತ ವಿಭಾಗದವತಿಯಿಂದ ಹಮ್ಮಿಕೊಂಡಿದ್ದ ಸಂಸ್ಕೃತೋತ್ಸವ ಹಾಗೂ ಪ್ರತಿಭಾಪುರಸ್ಕಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಆಶೀರ್ವಚನ ನೀಡಿದ ಶ್ರೀಗಳು, ಸಂಸ್ಕೃತ ಭಾಷೆ ಅತ್ಯಂತ ಶ್ರೇಷ್ಠ ಭಾಷೆ, ಶ್ರೀಮಂತ ಭಾಷೆ. ಈ ಭಾರತದ ಶಕ್ತಿ ಸಂಪತ್ತು ಅಪಾರವಾದದ್ದು, ಭಾರತದ ಎಲ್ಲ ಭಾಷೆಗಳಿಗೂ ಕಾಣಿಕೆ ಕೊಟ್ಟ ಭಾಷೆ ಸಂಸ್ಕೃತ ಭಾಷೆ. ಸಂಸ್ಕೃತ ಭಾಷೆಯನ್ನು ಪ್ರತಿಯೊಬ್ಬರು ಕಲಿಯುವ ಪ್ರಯತ್ನ ಮಾಡಬೇಕು ಎಂದು ಕರೆ ನೀಡಿದರು.



ವಿಜಯಪುರದ ಬಿಎಲ್‌ಡಿಇ ಸಂಸ್ಥೆಯಲ್ಲಿ ಏರ್ಪಡಿಸಲಾಗಿದ್ದ ಸಂಸ್ಕೃತೋತ್ಸವಕ್ಕೆ ಚಾಲನೆ ನೀಡಿದ ಸಂದರ್ಭ.

ಸಂಸ್ಕೃತ ಭಾಷೆಯ ಬಗ್ಗೆ ವಿದೇಶಗಳಲ್ಲಿಯೂ ಒಲವು ಬೆಳೆಯುತ್ತಿದೆ. ವಿದೇಶಿಗರಲ್ಲಿ ಅನೇಕರು ಸಂಸ್ಕೃತ ಭಾಷೆಯ ಮಹತ್ವವನ್ನು ಅರಿತುಕೊಂಡಿದ್ದಾರೆ. ಅವರು ಸಹ ಸಂಸ್ಕೃತ ಕಲಿಯುತ್ತಿದ್ದಾರೆ, ಅನೇಕರು ಸಂಸ್ಕೃತ ಕಲಿಯಲು ಉತ್ಸುಕರಾಗಿದ್ದಾರೆ. ಫ್ರಾನ್ಸ್,ಜರ್ಮನ್ ದೇಶಗಳಲ್ಲಿಯೂ ಸಂಸ್ಕೃತವಿದೆ. ಎಲ್ಲ ಭಾಷೆಗಳು ಜಗತ್ತಿನ ಭಾಷೆಗಳು. ಎಲ್ಲ ಭಾಷೆಗಳಲ್ಲೂ ಒಂದೊಂದು ವೈಶಿಷ್ಟ್ಯವಿದೆ. ತಲೆಯ ಭಾಷೆಯನ್ನು ತಲೆಗಾಗಿ ಬಳಸುವುದು. ಹೃದಯದ ಭಾಷೆಯನ್ನು ಜೀವನಕ್ಕಾಗಿ ಬಳಸುವುದು. ಸಂಸ್ಕೃತ ಭಾಷೆಯ ಭಾವ ಎಲ್ಲರಿಗೂ ತಿಳಿಯುವಂತಹದ್ದು ಎಂದು ವಿವರಿಸಿದರು. ಪಂ.ಮಧ್ವಾಚಾರ್ಯ ಮೊಕಾಶಿ ಮಾತನಾಡಿದರು. ಪ್ರಾಚಾರ್ಯ ಡಾ.ಕೆ.ಜಿ.ಪೂಜಾರಿ, ಬಿಎಲ್‌ಡಿಇ ಸಂಸ್ಥೆಯ ಆಡಳಿತಾಧಿಕಾರಿ ಪ್ರೊ.ಎಸ್.ಎಚ್.ಲಗಳಿ, ಪ್ರೊ.ಜಿ.ಆರ್.ಅಂಬಲಿ, ಡಾ.ಯು.ಎಸ್.ಪೂಜಾರಿ, ಡಾ.ಎಸ್.ಟಿ.ಮೇರವಾಡೆ, ರವೀಂದ್ರ ಕೋಮಾರ, ಜ್ಯೋತಿ ಕೋರಿ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

Scanned with CamScanner

ಸಂಯುಕ್ತ ಕರ್ನಾಟಕ

ಶುಕ್ರವಾರ, 7, ಸೆಪ್ಟೆಂಬರ್, 2018,

ಬಿಎಲ್‌ಡಿಇ ಸಂಸ್ಥೆಯ ಎಸ್.ಬಿ ಕಲಾ ಹಾಗೂ ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯದ ಇಂಗ್ಲಿಷ್ ವಿಭಾಗದ ಪ್ರಾಧ್ಯಾಪಕ ಪ್ರೊ.ಆರ್. ಎಚ್.ಬಿದರಿ ಅವರು ನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ಸಂಸ್ಥೆಯ ಸಿಬ್ಬಂದಿ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಪ್ರಾಚಾರ್ಯ ಡಾ. ಕೆ.ಜಿ. ಪೂಜಾರಿ, ಆಡಳಿತಾಧಿಕಾರಿ ಎಸ್.ಎಚ್. ಲಗಳಿ, ಪುಷ್ಪಲತಾ ಬಿದರಿ ಹಾಗೂ ಸಿಬ್ಬಂದಿ ಇದ್ದರು.



Scanned with CamScanner

2
ಉದಯವಾಣಿ ಕಲಬುರಗಿ
ಶನಿವಾರ, ಸೆಪ್ಟೆಂಬರ್ 8, 2018

# ಬದುಕಿಗೆ ನೆಮ್ಮದಿ ತಂದಿದೆ ಶಿಕ್ಷಕ ವೃತ್ತಿ: ಪ್ರೊ। ಬಿದರಿ

ವಿಜಯಪುರ: ಸರ್ಕಾರದ ಯಾವುದೇ ವೃತ್ತಿ ಬದುಕಿನಲ್ಲಿ ನಿವೃತ್ತಿ ಎಂಬುದು ಸಹಜ ಪ್ರಕ್ರಿಯೆ. ಆದರೆ ಉಪನ್ಯಾಸಕ ವೃತ್ತಿ ಬದುಕಿನಲ್ಲಿ ವಿದ್ಯಾರ್ಥಿಗಳಿಗೆ ಪಾಠದ ಜತೆಗೆ ನೈತಿಕ ಶಿಕ್ಷಣ ಬೋಧಿಸಿದ ನೆಮ್ಮದಿ ಇದೆ ಎಂದು ನಿವೃತ್ತ ಪ್ರಾಧ್ಯಾಪಕ ಪ್ರೊ.ಆರ್.ಎಚ್. ಬಿದರಿ ಅಭಿಪ್ರಾಯಪಟ್ಟರು.

ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಹಾಗೂ ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದ ಇಂಗ್ಲಿಷ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ತಮಗೆ ಸಂಸ್ಥೆ ನೀಡಿದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನಿವೃತ್ತಿ ಹೊಂದಿದ ಮಾತ್ರಕ್ಕೆ ಎಲ್ಲವೂ ಮುಗಿಯಿತು ಎಂದಲ್ಲ, ಬದುಕಿನುದ್ದಕ್ಕೂ ಕಲಿಯುವುದು ಇದ್ದೇ ಇರುತ್ತದೆ. ನಿವೃತ್ತಿಯ ನಂತರವೂ ನಾನು ಸಕ್ರಿಯನಾಗಿರಲು ಬಯಸಿದ್ದು, ರಚನಾತ್ಮಕ ಕೆಲಸಗಳ ಮೂಲಕ ಕ್ರಿಯಾಶೀಲನಾಗಿರುತ್ತೇನೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ. ಕೆ.ಜಿ.ಪೂಜಾರಿ ಮಾತನಾಡಿ, ಪ್ರೊ.ಆರ್. ಎಚ್. ಬಿದರಿ. ಕಾಲೇಜಿನ ಎಲ್ಲ ಚಟುವಟಿಕೆಗಳಿಗೂ ಮುಂದಾಳತ್ವ ವಹಿಸುತ್ತಿದ್ದ ನಾಯಕರಂತಿದ್ದರು. ಲವಲವಿಕೆ, ಕ್ರಿಯಾಶೀಲತೆಗೆ ಮತ್ತೊಂದು ಹೆಸರು ಮಾಡಿದ್ದರು. ವೃತ್ತಿ ಬದುಕಿನ ಮೂರು ದಶಕಗಳಿಂದ ತಮ್ಮ ಕರ್ತವ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಿದ್ದರು. ಪ್ರೊ.ಬಿದರಿ ಅವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಹಾರೈಸಿದರು.

ಬಿಎಲ್‌ಡಿಇ ಸಂಸ್ಥೆಯ ಆಡಳಿತಾಧಿಕಾರಿ ಎಸ್.ಎಚ್.ಲಗಳಿ, ಪುಷ್ಪಲತಾ ಬಿದರಿ ಇತರರು ಉಪಸ್ಥಿತರಿದ್ದರು.




ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ-ಕೆಸಿಪಿ ವಿಜ್ಞಾನ ಕಾಲೇಜಿನ ಇಂಗ್ಲಿಷ್ ಪ್ರಾಧ್ಯಾಪಕ ಆರ್.ಎಚ್. ಬಿದರಿ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು.

Scanned with CamScanner

VK

ವಿಜಯ ಕರ್ನಾಟಕ

ಸೋಮವಾರ, 17 ಸೆಪ್ಟೆಂಬರ್ 2018 ನಮ್ಮ ವಿಜಯಪುರ III

# ಹಿಂದಿ ಕಲಿಕೆ ಅಗತ್ಯ

■ ವಿಕ ಸುದ್ದಿಲೋಕ ವಿಜಯಪುರ

ಭಾಷೆ ಯಾರ ಸ್ವತ್ತಲ್ಲ, ಮಾತೃಭಾಷೆಯೊಂದಿಗೆ ರಾಷ್ಟ್ರ ಭಾಷೆ ಕಲಿಯುವುದು ಅಗತ್ಯ ಎಂದು ಪ್ರೊ. ಎಸ್.ಎಸ್.ದೇಸಾಯಿ ಹೇಳಿದರು.

ನಗರದ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಜರುಗಿದ ಹಿಂದಿ ದಿವಸ ಸಮಾರೋಪ ಸಮೂರಂಭದಲ್ಲಿ ಅವರು ಮಾತನಾಡಿದರು.

ಹಿಂದಿ ಭಾಷೆ ಕಲಿಯುದಕ್ಕೆ ಒತ್ತಡವಿಲ್ಲ, ಪ್ರೀತಿಯಿಂದ ಕಲಿತರೆ ವಿಷಯದ ಅರ್ಥ ವಿಶಾಲವಾಗುವುದು. ಜತೆಗೆ ಎಲ್ಲ ಭಾಷೆಯನ್ನು ಪ್ರೀತಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಆತ್ಮವಿಶ್ವಾಸದ ಓದು, ಸಮಾಜ ಸೇವೆ, ದೇಶಭಕ್ತಿ ಹಾಗೂ ಸೃಜನಾತ್ಮಕ ಕಾರ್ಯದೊಂದಿಗೆ ವಿದ್ಯಾರ್ಥಿ ಜೀವನ ಪರಿಪೂರ್ಣವಾಗಬೇಕು ಎಂದರು.

ಪ್ರಾಚಾರ್ಯ ಡಾ.ಕೆ.ಜಿ.ಪೂಜಾರಿ, ಎಸ್.ಟಿ.ಮೇರವಾಡೆ, ಜಿ.ಆರ್.ಅಂಬಲಿ, ಎಸ್.ಜೆ.ಪವಾರ, ಬಿ.ವಿ.ಪಾಟೀಲ, ಗಂಗಾಧರ ಗೇಂಡ, ಜ್ಯೋತಿ ಕೋರಿ ಇದ್ದರು.



ವಿಜಯಪುರದ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಕಾಲೇಜ್‌ನಲ್ಲಿ ಹಿಂದಿ ದಿವಸ ಸಮಾರೋಪ ಕಾರ್ಯಕ್ರಮ ಜರುಗಿತು.

Scanned with CamScanner

3
ಕಲಬುರಗಿ ಉದಯವಾಣಿ
ರವಿವಾರ, ಸೆಪ್ಟೆಂಬರ್ 30, 2018

# ರಾಷ್ಟ್ರದ ಪ್ರಗತಿಗೆ ಯುವಕರು ಶ್ರಮಿಸಲಿ

## ■ ಯುವಶಕ್ತಿಯೇ ಆಧುನಿಕ ಭಾರತದ ನಿರ್ಮಾತೃಗಳು ■ ಉದಾತ್ತ ಮನೋಭಾವ ಬೆಳೆಸಿಕೊಳ್ಳಲು ಸಲಹೆ

ವಿಜಯಪುರ: ಆಧುನಿಕ ಭಾರತಕ್ಕೆ ಯುವಕರೇ ಮಹಾನ್ ಶಕ್ತಿ, ಆಸ್ತಿ. ಹೀಗಾಗಿ ಯುವಜನತೆ ಭವಿಷ್ಯದ ಭಾರತ ಕಟ್ಟುವುದಕ್ಕಾಗಿ ಅನುಕರಣೀಯ ಕೆಲಸಗಳನ್ನು ಮಾಡಬೇಕು ಎಂದು ನಾಗಠಾಣ ಶಾಸಕ ದೇವಾನಂದ ಚವ್ಹಾಣ ಕರೆ ನೀಡಿದರು.

ಶನಿವಾರ ನಗರದಲ್ಲಿ ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಿಎಲ್‌ಡಿಇ ಸಂಸ್ಥೆಯ ಎಸ್.ಬಿ. ಆರ್ಟ್ಸ್ ಮತ್ತು ಕೆಸಿಪಿ ಸೈನ್ಸ್ ಕಾಲೇಜ್ ಮತ್ತು ನೆಹರು ಯುವ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾಮಟ್ಟದ ಯುವಜನೋತ್ಸವ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ರಾಷ್ಟ್ರದ ಪ್ರಗತಿಗಾಗಿ ಶ್ರಮಿಸಬೇಕು ಎಂದು ಮನವಿ ಮಾಡಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಸಂಜಯ ಶೆಟ್ಟೆಣ್ಣವರ ಮಾತನಾಡಿ, ಅಬ್ಬರದ ಸಂಗೀತದಿಂದ ಹಿಮ್ಮೇಳನ, ಸೂಕ್ಷ್ಮ ಧ್ವನಿಗಳು ಕೇಳುತ್ತಲೇ ಇಲ್ಲ, ಹೀಗಾಗಿ ಆ ಸಂಗೀತದ ಸವಿ ಧ್ವನಿ ಆಸ್ವಾದಿಸುವ ಅವಕಾಶವನ್ನೇ ಕಳೆದುಕೊಳ್ಳುತ್ತಿದ್ದೇವೆ ಎಂದು ವಿಷಾದಿಸಿದರು.







**ವಿಜಯಪುರ: ನಗರದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾಮಟ್ಟದ ಯುವಜನೋತ್ಸವ ಸಮಾರಂಭಕ್ಕೆ ಶಾಸಕ ದೇವಾನಂದ ಚವ್ಹಾಣ ಚಾಲನೆ ನೀಡಿದರು. ನಾಗಠಾಣ ಶಾಸಕ ದೇವಾನಂದ ಚವ್ಹಾಣ ಅವರನ್ನು ಸನ್ಮಾನಿಸಲಾಯಿತು. (ಬಲಚಿತ್ರ)**

ಇನ್ನೊಂದೆಡೆ ಕರೋಕೆ ಸಂಸ್ಕೃತಿ ಹೆಚ್ಚಾಗುತ್ತಿದೆ, ಟ್ರ್ಯಾಕ್ ಆಧರಿಸಿ ಹಾಡುಗಳನ್ನು ಹಾಡುವುದರಿಂದ ಸಂಗೀತ ವಾದ್ಯ ಕಲಾವಿದರ ಕೊರತೆ ಎದುರಾಗುತ್ತಿದೆ. ಹೊಸ ತಲೆಮಾರಿನ ಯುವಕರು ಸಂಗೀತ ವಾದ್ಯಗಳ ನುಡಿಸುವ ವಿದ್ಯೆ ಕಲಿಕೆಯಿಂದ ವಿಮುಖರಾಗುತ್ತಿದ್ದಾರೆ. ಕರೋಕೆಯ ಜೊತೆಗೆ ನಮ್ಮ ನೆಲದ ಮೂಲ ಸಂಗೀತ ಆಲಿಸುವವರ ಸಂಖ್ಯೆ ಕ್ಷೀಣಿಸುತ್ತಿದೆ ಎಂದರು.

ಯುವಜನರಲ್ಲಿ ಸಾಂಸ್ಕೃತಿಕ ಮನೋಭಾವನೆ, ರಾಷ್ಟ್ರಾಭಿಮಾನ ಮೊದಲಾದ ಉದಾತ್ತ ಸಂಸ್ಕಾರಗಳನ್ನು ಮೈಗೂಡಿಸುವಲ್ಲಿ ಯುವಜನೋತ್ಸವ ಪೂರಕವಾಗಿವೆ ಎಂದರು.

ಅರವಿಂದ ಕೊಪ್ಪ, ಶ್ರೋತ, ಸಂತೋಷಕುಮಾರ ನಿಗಡಿ, ಜಾವೇದ ಜಮದಾರ, ಪ್ರಾಚಾರ್ಯ ಡಾ। ಎಸ್.ಜಿ. ಪೂಜಾರಿ, ಜಿ.ಆರ್. ಅಂಬಲಿ ಇದ್ದರು.

ಯುವ ಸಬಲೀಕರಣ ಇಲಾಖೆ ಸಹಾಯಕ ನಿರ್ದೇಶಕ ಎಸ್.ಜಿ.ಲೋಣಿ ಸ್ವಾಗತಿಸಿದರು. ಡಿ.ದಯಾನಂದ ವಂದಿಸಿದರು.

Scanned with CamScanner

ವಿಜಯವಾಣಿ ನಂ.1
ಕನ್ನಡಿಗರ ಧ್ವನಿ
ಕನ್ನಡ ದಿನಪತ್ರಿಕೆ

ಭಾನುವಾರ 30 ಸೆಪ್ಟೆಂಬರ್ 2018 • 30 SEPTEMBER 2018

# ರಾಷ್ಟ್ರ ನಿರ್ಮಾಣದಲ್ಲಿ ಯುವಶಕ್ತಿ ಪಾತ್ರ ಅನನ್ಯ

## ಜಿಲ್ಲಾಧಿಕಾರಿ ಎಸ್.ಬಿ. ಶೆಟ್ಟೆಣ್ಣವರ ಅಭಿಮತ | ಜಿಲ್ಲಾ ಮಟ್ಟದ ಯುವಜನೋತ್ಸವ

■ ವಿಜಯವಾಣಿ ಸುದ್ದಿಜಾಲ ವಿಜಯಪುರ

ಇಂದಿನ ದಿನಗಳಲ್ಲಿ ರಾಷ್ಟ್ರ ನಿರ್ಮಾಣದಲ್ಲಿ ಯುವಶಕ್ತಿ ಪಾತ್ರ ಮಹತ್ವದಾಗಿದ್ದು, ದೇಶಕ್ಕಾಗಿ ದುಡಿಯುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಎಸ್.ಬಿ. ಶೆಟ್ಟೆಣ್ಣವರ ಹೇಳಿದರು.

**» ಗಮನ ಸೆಳೆದ ಸಾಂಸ್ಕೃತಿಕ ಕಾರ್ಯಕ್ರಮ**

ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಕಾಲೇಜಿನಲ್ಲಿ ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ನೆಹರು ಯುವ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಶನಿವಾರ ಹಮ್ಮಿಕೊಂಡ ಜಿಲ್ಲಾಮಟ್ಟದ ಯುವಜನೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಡಿಜೆಗಳ ಅಬ್ಬರದಲ್ಲಿ ಸಂಗೀತದ ಸೂಕ್ಷ್ಮ ತರಂಗಗಳು, ಆಲಾಪಗಳು ಕೇಳದಾಗಿವೆ. ಡಿಜೆಗಳ ಅಬ್ಬರದಿಂದಾಗಿ ಸಂಗೀತದ ಹಿಮ್ಮೇಳನ, ಸೂಕ್ಷ್ಮ ಧ್ವನಿಗಳು ಕೇಳುತ್ತಲೇ ಇಲ್ಲ. ಹೀಗಾಗಿ ಆ ಸಂಗೀತದ ಸವಿಧ್ವನಿಯನ್ನು ಆಸ್ವಾದಿಸುವ ಅವಕಾಶವನ್ನೇ ಕಳೆದುಕೊಳ್ಳುತ್ತಿದ್ದೇವೆ ಎಂದರು.

ಯುವಜನರಲ್ಲಿ ಸಾಂಸ್ಕೃತಿಕ ಮನೋಭಾವನೆ, ರಾಷ್ಟ್ರಾಭಿಮಾನ ಮೊದಲಾದ ಉದಾತ್ತ ಸಂಸ್ಕಾರಗಳನ್ನು ಮೈಗೂಡಿಸುವಲ್ಲಿ ಯುವಜನೋತ್ಸವ ಕಾರ್ಯಕ್ರಮಗಳು ಪೂರಕವಾಗಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಯುವಜನೋತ್ಸವಕ್ಕೆ ಚಾಲನೆ ನೀಡಿದ ನಾಗಠಾಣ ಶಾಸಕ ಡಾ.ದೇವಾನಂದ ಚವಾಣ್ ಮಾತನಾಡಿ, ಯುವಕರು ದೇಶದ ಮಹಾನ್ ಶಕ್ತಿ. ಯುವಜನತೆ ಉತ್ತಮ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ರಾಷ್ಟ್ರದ ಪ್ರಗತಿಗಾಗಿ ಶ್ರಮಿಸಬೇಕು ಎಂದು ತಿಳಿಸಿದರು.

ರಾಷ್ಟ್ರೀಯ ಯುವ ಪ್ರಶಸ್ತಿ ಪುರಸ್ಕೃತರ ಫೆಡರೇಷನ್ ಅಧ್ಯಕ್ಷ ಡಾ.ಜಾವೇದ ಜಮಾದಾರ, ರಾಜ್ಯ ಯುವ ಪ್ರಶಸ್ತಿ ಪುರಸ್ಕೃತ ಅರವಿಂದ ಕೊಪ್ಪ, ಸಂತೋಷಕುಮಾರ ನಿಗಡಿ, ಪ್ರಾಚಾರ್ಯ ಡಾ.ಎಸ್.ಜಿ. ಪೂಜಾರಿ, ಪ್ರೊ.ಜಿ.ಆರ್. ಅಂಬಲಿ ಮೊದಲಾದವರು ಉಪಸ್ಥಿತರಿದ್ದರು.

ಯುವ ಸಬಲೀಕರಣ ಇಲಾಖೆ ಸಹಾಯಕ ನಿರ್ದೇಶಕ ಎಸ್.ಜಿ. ಲೋಣಿ ಸ್ವಾಗತಿಸಿದರು. ನೆಹರು ಯುವ ಕೇಂದ್ರದ ಜಿಲ್ಲಾ ಸಮನ್ವಯಾಧಿಕಾರಿ ಡಿ.ದಯಾನಂದ ವಂದಿಸಿದರು.

ಯುವಜನೋತ್ಸವದಲ್ಲಿ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳು ಏರ್ಪಡಿಸಲಾಗಿದ್ದು, ಪ್ರೇಕ್ಷಕರ ಗಮನ ಸೆಳೆದವು.




ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಎಸ್.ಬಿ.ಕಲಾ ಮತ್ತು ಕೆಸಿಪಿ ವಿಜ್ಞಾನ ಕಾಲೇಜಿನಲ್ಲಿ ಜರುಗಿದ ಜಿಲ್ಲಾಮಟ್ಟದ ಯುವಜನೋತ್ಸವ ಸಮಾರಂಭವನ್ನು ಶಾಸಕ ದೇವಾನಂದ ಚವಾಣ್ ಉದ್ಘಾಟಿಸಿದರು.

> ಕೆರೋಕೆ ಸಂಸ್ಕೃತಿ ಹೆಚ್ಚಾಗುತ್ತಿದೆ. ಟ್ರ್ಯಾಕ್ ಆಧರಿಸಿ ಹಾಡುಗಳನ್ನು ಹಾಡುವುದು ಅಧಿಕವಾಗುತ್ತಿದೆ. ಹೀಗಾಗಿ ತಬಲಾ ವಾದಕರು, ಹಾರ್ಮೋನಿಯಂ ವಾದಕರು ಮೊದಲಾದ ಸಂಗೀತ ಹಿಮ್ಮೇಳನ ನುಡಿಸುವ ವಾದ್ಯಗಾರರು ಹೆಚ್ಚಾಗಿ ರೂಪುಗೊಳ್ಳುತ್ತಿಲ್ಲ. ಸಂಗೀತಕ್ಕೆ ಅಪಾರವಾದ ಶಕ್ತಿ ಇದೆ. ಸಾಂಪ್ರದಾಯಿಕ ಶೈಲಿಯಲ್ಲಿಯೂ ನಾವು ಸಂಗೀತ ಆಲಿಸಬೇಕು, ಸಂಗೀತ ವಾದ್ಯ ನುಡಿಸುವ ಮನೋಭಾವವನ್ನು ಯುವಜನತೆ ರೂಢಿಸಿಕೊಳ್ಳಬೇಕಾಗಿರುವುದು ಇಂದಿನ ಅಗತ್ಯವಾಗಿದೆ.
>
> | ಎಸ್.ಬಿ. ಶೆಟ್ಟೆಣ್ಣವರ, ಜಿಲ್ಲಾಧಿಕಾರಿ

Scanned with CamScanner

VK

ವಿಜಯ ಕರ್ನಾಟಕ

ಭಾನುವಾರ, 30 ಸೆಪ್ಟೆಂಬರ್ 2018 ನಮ್ಮ ವಿಜಯಪುರ III

ಜಿಲ್ಲಾಮಟ್ಟದ ಯುವಜನೋತ್ಸವದಲ್ಲಿ ಶಾಸಕ ದೇವಾನಂದ ನುಡಿ

# ಪ್ರತಿಭೆಗೆ ಯುವಜನೋತ್ಸವ ಪೂರಕ

**ವಿಕ ಸುದ್ದಿಲೋಕ** ವಿಜಯಪುರ

ಯುವಕರು ರಾಷ್ಟ್ರದ ಮಹಾನ್ ಶಕ್ತಿ. ಅಂಥ ಯುವಕರು ರಚನಾತ್ಮಕ ಚಟುವಟಿಕೆಗಳಲ್ಲಿ ಗುರುತಿಸಿಕೊಳ್ಳುವ ಮೂಲಕ ರಾಷ್ಟ್ರದ ಐಕ್ಯತೆ ಹಾಗೂ ಪ್ರಗತಿಗಾಗಿ ಶ್ರಮಿಸಬೇಕು ಎಂದು ನಾಗಠಾಣ ಶಾಸಕ ದೇವಾನಂದ ಚೌಹಾಣ್ ಹೇಳಿದರು.

ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಆರ್ಟ್ಸ್ ಮತ್ತು ಕೆಸಿಪಿ ಸೈನ್ಸ್ ಕಾಲೇಜ್ ಹಾಗೂ ನೆಹರು ಯುವ ಕೇಂದ್ರದ ಸಹಯೋಗದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಯುವಜನೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜ್ ಹಂತದಲ್ಲಿ ನಡೆಯುವ ಯುವಜನೋತ್ಸವಕ್ಕೆ ತನ್ನದೇ ಮಹತ್ವ ಹೊಂದಿದೆ. ಈ ಉತ್ಸವ ವಿದ್ಯಾರ್ಥಿಗಳಲ್ಲಿ ಸುಪ್ತವಾಗಿರುವ ಪ್ರತಿಭೆಗೆ ಸೂಕ್ತ ವೇದಿಕೆಯಾಗಿದೆ. ಹಾಗಾಗಿ ವಿದ್ಯಾರ್ಥಿಗಳು ಕೇವಲ ಪಠ್ಯ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗದೇ, ಯುವ ಜನೋತ್ಸವದಲ್ಲಿ ನಡೆಯುವ ನಾನಾ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಮೂಲಕ ಕಾಲೇಜ್ ಹಾಗೂ ಸಮಾಜದಲ್ಲಿ ಗುರುತಿಸಿ ಕೊಳ್ಳಬೇಕೆಂದು ಸಲಹೆ ಮಾಡಿದರು.

ಜಿಲ್ಲಾಧಿಕಾರಿ ಡಾ. ಎಸ್.ಬಿ. ಶೆಟ್ಟೆಣ್ಣವರ ಅಧ್ಯಕ್ಷತೆ ವಹಿಸಿ, ಹಿಂದಿನ ವರ್ಷಗಳಲ್ಲಿ ಸಂಗೀತಕ್ಕೆ ವಿಶಿಷ್ಟ ಸ್ಥಾನ-ಮಾನವಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಡಿಜೆ ಸಂಸ್ಕೃತಿ ಸನಾತನ ಸಂಗೀತ ಪರಂಪರೆಯನ್ನು ಹಿಂದಿಕ್ಕಿದೆ. ಇದರಿಂದಾಗಿ ಮೆಲೋಡಿಯಸ್ ಸಂಗೀತ, ಅವುಗಳ ಹಿಮ್ಮೇಳ ಹಾಗೂ ಅದರಿಂದ ಹೊರಸೂಸುತ್ತಿದ್ದ ಸೂಕ್ಷ್ಮ ತರಂಗಗಳನ್ನು ಮರೆತಂತಾಗಿರುವುದು ಕಳವಳಕಾರಿ ಸಂಗತಿ ಎಂದರು.




ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಆರ್ಟ್ಸ್ ಮತ್ತು ಕೆಸಿಪಿ ಸೈನ್ಸ್ ಕಾಲೇಜ್‌ನಲ್ಲಿ ನಡೆದ ಯುವಜನೋತ್ಸವಕ್ಕೆ ಚಾಲನೆ ನೀಡಿ ನಾಗಠಾಣ ಶಾಸಕ ದೇವಾನಂದ ಚೌಹಾಣ್ ಮಾತನಾಡಿದರು.

ಹಿಂದಿನ ಕಾಲದಲ್ಲಿ ಹೊರಸೂಸುತ್ತಿದ್ದ ಸಂಗೀತ ಹಾಗೂ ಅದರ ಸೂಕ್ಷ್ಮ ತರಂಗಗಳು ಹಾಗೂ ಆಲಾಪಗಳಿಂದ ಮೈಮನಸ್ಸು ಮುದವಾಗುತ್ತಿತ್ತು. ಮನಸ್ಸಿಗೆ ಆನಂದದೊಟ್ಟಿಗೆ ನೆಮ್ಮದಿಯೂ ಲಭಿಸುತ್ತಿತ್ತು. ಆದರೆ ಇಂದಿನ ಡಿಜೆ ಸಂಸ್ಕೃತಿಗಳು ಈ ನೆಮ್ಮದಿ ಹಾಗೂ ಆನಂದವನ್ನೇ ಕಿತ್ತುಕೊಂಡಿರುವುದು ನೋವಿನ ಸಂಗತಿಯಾಗಿದೆ ಎಂದರು.

ರಾಷ್ಟ್ರೀಯ ಯುವ ಪ್ರಶಸ್ತಿ ಪುರಸ್ಕೃತರ ಫೆಡರೇಷನ್ ಅಧ್ಯಕ್ಷ ಡಾ.ಜಾವೀದ್ ಜಮಾದಾರ, ರಾಜ್ಯ ಯುವ ಪ್ರಶಸ್ತಿ ಪುರಸ್ಕೃತ ಅರವಿಂದ ಕೊಪ್ಪ, ಸಂಜೀವ ಜೋತ, ಸಂತೋಷಕುಮಾರ ನಿಗಡಿ, ಪ್ರಾಚಾರ್ಯ ಡಾ.ಎಸ್.ಜಿ. ಪೂಜಾರಿ, ಪ್ರೊ.ಜಿ.ಆರ್. ಅಂಬಲಿ ಮತ್ತಿತರರಿದ್ದರು.

ಯುವ ಸಬಲೀಕರಣ ಇಲಾಖೆ ಸಹಾಯಕ ನಿರ್ದೇಶಕ ಎಸ್.ಜಿ. ಲೋಣಿ ಸ್ವಾಗತಿಸಿದರು. ನೆಹರು ಯುವ ಕೇಂದ್ರದ ಜಿಲ್ಲಾ ಸಮನ್ವಯಾಧಿಕಾರಿ ಡಿ.ದಯಾನಂದ ವಂದಿಸಿದರು.

Scanned with CamScanner

ಕನ್ನಡಪ್ರಭ
ಭಾನುವಾರ 30.9.2018

# ಜನಪದ ಕಲೆ ಪ್ರೋತ್ಸಾಹಿಸಿ

## ಜಿಲ್ಲಾಮಟ್ಟದ ಯುವಜನೋತ್ಸವದಲ್ಲಿ ಶಾಸಕ ಡಾ. ಚವ್ಹಾಣ

• **ಕನ್ನಡಪ್ರಭ ವಾರ್ತೆ** ವಿಜಯಪುರ

ಕಲಾವಿದರ ಕಲೆಗೆ ಪ್ರೋತ್ಸಾಹಿಸಿದರೆ ಮಾತ್ರ ದೇಶದ ಸಂಸ್ಕೃತಿ ಉಳಿಯಲು ಸಾಧ್ಯ. ಜನಪದ ಕಲೆ ಉಳಿಯಲು ಎಲ್ಲರ ಪ್ರೋತ್ಸಾಹ ಮುಖ್ಯ ಎಂದು ನಾಗಠಾಣ ಶಾಸಕ ಡಾ.ದೇವಾನಂದ ಚವ್ಹಾಣ ಹೇಳಿದರು.

ಬಿಎಲ್‌ಡಿಇ ಸಂಸ್ಥೆಯ ಎಸ್.ಬಿ.ಆರ್ಟ್ಸ್ ಮತ್ತು ಕೆಸಿಪಿ ಸೈನ್ಸ್ ಕಾಲೇಜಿನ ಸಭಾಂಗಣದಲ್ಲಿ ಶನಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಶ್ರಯದಲ್ಲಿ ನಡೆದ ಜಿಲ್ಲಾ ಮಟ್ಟದ ಯುವಜನೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮೀಣ ಜಾನಪದ ಸಂಸ್ಕೃತಿಗೆ ತನ್ನದೇಯಾದ ಸೊಗಡು ಇದೆ. ಗ್ರಾಮೀಣ ಕಲೆಯನ್ನು ಉಳಿಸಲು ಕಲಾವಿದರಿಗೆ ಪ್ರೋತ್ಸಾಹಿಸುವುದು ಇಂದು ತುರ್ತು ಅಗತ್ಯವಿದೆ. ಇಂದು ಜನಪದ ಹಾಡುಗಳು ಮರೆಯಾಗುತ್ತಿರುವುದು ವಿಪರ್ಯಾಸ. ಅವುಗಳನ್ನು ರಕ್ಷಣೆ ಮಾಡುವ ಕಾರ್ಯ ಪ್ರತಿಯೊಬ್ಬರ ಮೇಲಿದೆ ಎಂದು ಹೇಳಿದರು.

ಯುವಕರು ದೇಶದ ಮಹಾನ್ ಶಕ್ತಿ. ಯುವಜನತೆ ಉತ್ತಮ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ರಾಷ್ಟ್ರದ ಪ್ರಗತಿಗಾಗಿ ಶ್ರಮಿಸಬೇಕು. ನಮ್ಮ ಪರಂಪರೆಯ ಜಾನಪದ, ಸಂಸ್ಕೃತಿಯನ್ನು ಮಕ್ಕಳಲ್ಲಿ ಅಳವಡಿಸಬೇಕಿದೆ. ಯುವಜನರಲ್ಲಿ ಸಾಂಸ್ಕೃತಿಕ ಮನೋಭಾವನೆ, ರಾಷ್ಟ್ರಾಭಿಮಾನ ಮೊದಲಾದ ಉದಾತ್ತ ಸಂಸ್ಕಾರಗಳನ್ನು ಮೈಗೂಡಿಸುವಲ್ಲಿ ಯುವಜನೋತ್ಸವ ಕಾರ್ಯಕ್ರಮಗಳು ಪೂರಕವಾಗಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾಧಿಕಾರಿ ಎಸ್.ಬಿ ಶೆಟ್ಟೆಣ್ಣವರ ಅವರು, ಸಂಗೀತಕ್ಕೆ ಅಪಾರ ಶಕ್ತಿ ಇದೆ, ಸಾಂಪ್ರದಾಯಿಕ ಶೈಲಿಯಲ್ಲಿಯೂ ನಾವು ಸಂಗೀತ ಆಲಿಸಬೇಕು. ಡಿಜೆಗಳ ಅಬ್ಬರದಿಂದಾಗಿ ಸಂಗೀತದ ಹಿಮ್ಮೇಳನ, ಸೂಕ್ಷ್ಮ ಧ್ವನಿಗಳು ಕೇಳುತ್ತಲೇ ಇಲ್ಲ, ಹೀಗಾಗಿ ಆ ಸಂಗೀತದ ಸವಿಧ್ವನಿಯನ್ನು ಆಸ್ವಾದಿಸುವ ಅವಕಾಶವನ್ನೇ ನಾವು ಕಳೆದುಕೊಳ್ಳುತ್ತಿರುವುದು ದೊಡ್ಡ ದುರಂತ ಎಂದರು.

ಟ್ರ್ಯಾಕ್ ಆಧರಿಸಿ ಹಾಡುಗಳನ್ನು ಹಾಡುವುದು ಅಧಿಕವಾಗುತ್ತಿದೆ. ಹೀಗಾಗಿ ತಬಲಾ ವಾದಕರು, ಹಾರ್ಮೋನಿಯಂ ವಾದಕರು ಮೊದಲಾದ ಸಂಗೀತ ಹಿಮ್ಮೇಳನ ನುಡಿಸುವ ವಾದ್ಯಗಾರರು ಹೆಚ್ಚಾಗಿ ರೂಪುಗೊಳ್ಳುತ್ತಿಲ್ಲ, ಸಂಗೀತ ವಾದ್ಯ ನುಡಿಸುವ ಮನೋಭಾವನೆಯನ್ನು ಯುವಜನತೆ ರೂಢಿಸಿಕೊಳ್ಳಬೇಕಾಗಿರುವುದು ಇಂದಿನ ಅಗತ್ಯವಾಗಿದೆ ಎಂದರು.

ರಾಷ್ಟ್ರೀಯ ಯುವ ಪ್ರಶಸ್ತಿ ಪುರಸ್ಕೃತರ ಫೆಡರೇಶನ್ ಅಧ್ಯಕ್ಷ ಡಾ.ಜಾವೇದ ಜಮದಾರ, ರಾಜ್ಯ ಯುವ ಪ್ರಶಸ್ತಿ ಪುರಸ್ಕೃತರಾದ ಅರವಿಂದ ಕೊಪ್ಪ, ಚೇತ, ಸಂತೋಷಕುಮಾರ ನಿಗಡಿ, ಪ್ರಾಚಾರ್ಯ ಡಾ.ಎಸ್.ಜಿ. ಪೂಜಾರಿ, ಪ್ರೊ.ಜೆ.ಆರ್. ಅಂಬಲಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಯುವಸಬಲೀಕರಣ ಇಲಾಖೆ ಸಹಾಯಕ ನಿರ್ದೇಶಕ ಎಸ್.ಜಿ. ಲೋಣಿ ಸ್ವಾಗತಿಸಿದರು. ಎನ್‌ವೈಕೆ ಜಿಲ್ಲಾ ಸಮನ್ವಯಾಧಿಕಾರಿ ಡಿ.ದಯಾನಂದ ವಂದಿಸಿದರು.



ವಿಜಯಪುರದಲ್ಲಿ ನಡೆದ ಯುವಜನೋತ್ಸವ ಸಮಾರಂಭಕ್ಕೆ ಶಾಸಕ ಡಾ.ದೇವಾನಂದ ಚವ್ಹಾಣ ಚಾಲನೆ ನೀಡಿದರು.

- ಗ್ರಾಮೀಣ ಜಾನಪದ ಸಂಸ್ಕೃತಿಗೆ ತನ್ನದೇಯಾದ ಸೊಗಡು ಇದೆ.
- ಗ್ರಾಮೀಣ ಕಲೆ ಉಳಿಸಲು ಕಲಾವಿದರಿಗೆ ಪ್ರೋತ್ಸಾಹಿಸುವುದು ಇಂದು ತುರ್ತು ಅಗತ್ಯವಿದೆ.
- ಇಂದು ಜನಪದ ಹಾಡುಗಳು ಮರೆಯಾಗುತ್ತಿರುವುದು ವಿಪರ್ಯಾಸ.
- ಅವುಗಳನ್ನು ರಕ್ಷಣೆ ಮಾಡುವ ಕಾರ್ಯ ಪ್ರತಿಯೊಬ್ಬರ ಮೇಲಿದೆ

ಸಂಯುಕ್ತ ಕರ್ನಾಟಕ ರವಿವಾರ, ೩೦, ಸೆಪ್ಟೆಂಬರ್, ೨೦೧೮, ಹುಬ್ಬಳ್ಳಿ 3

### ಜಿಲ್ಲಾಧಿಕಾರಿ ಸಂಜಯ ಶೆಟ್ಟೆಣ್ಣವರ ವಿಷಾದ

# ಡಿಜೆಗಳ ಅಬ್ಬರದಿಂದ ಸಂಗೀತಕ್ಕೆ ಹೊಡೆತ

**ಸಂ.ಕ. ಸಮಾಚಾರ ವಿಜಯಪುರ**

ಡಿಜೆಗಳ ಅಬ್ಬರದಲ್ಲಿ ಸಂಗೀತದ ಸೂಕ್ಷ್ಮ ತರಂಗಗಳು, ಆಲಾಪಗಳು ಕೇಳದಾಗಿವೆ ಎಂದು ಜಿಲ್ಲಾಧಿಕಾರಿ ಸಂಜಯ ಶೆಟ್ಟೆಣ್ಣವರ ವಿಷಾದಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಹಾಗೂ ಬಿಎಲ್‌ಡಿಇ ಸಂಸ್ಥೆಯ ಎಸ್.ಬಿ.ಆರ್ಟ್ಸ್ ಮತ್ತು ಕೆಸಿಪಿ ಸಾಯಿನ್ಸ್ ಕಾಲೇಜ್ ಮತ್ತು ನೆಹರು ಯುವ ಕೇಂದ್ರದ ಆಶ್ರಯದಲ್ಲಿ ಜರುಗಿದ ಜಿಲ್ಲಾ ಮಟ್ಟದ ಯುವಜನೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಡಿಜೆಗಳ ಅಬ್ಬರದಿಂದಾಗಿ ಸಂಗೀತದ ಹಿಮ್ಮೇಳನ, ಸೂಕ್ಷ್ಮ ಧ್ವನಿಗಳು ಕೇಳುತ್ತಲೇ ಇಲ್ಲ, ಹೀಗಾಗಿ ಆ ಸಂಗೀತದ ಸವಿಧ್ವನಿಯನ್ನು ಆಸ್ವಾದಿಸುವ ಅವಕಾಶವನ್ನೇ ಕಳೆದುಕೊಳ್ಳುತ್ತಿದ್ದೇವೆ ಎಂದರು.

ಇನ್ನೊಂದೆಡೆ ಕರೋಕೆ ಸಂಸ್ಕೃತಿ ಹೆಚ್ಚಾಗುತ್ತಿದೆ, ಟ್ರ್ಯಾಕ್ ಆದ-ರಿಸಿ ಹಾಡುಗಳನ್ನು ಹಾಡುವುದು ಅಧಿಕವಾಗುತ್ತಿದೆ, ಹೀಗಾಗಿ ತಬಲಾ ವಾದಕರು, ಹಾರ್ಮೋನಿಯಂ ವಾದಕರು ಮೊದಲಾದ ಸಂಗೀತ ಹಿಮ್ಮೇಳನ ನುಡಿಸುವ ವಾದ್ಯಗಾರರು ಹೆಚ್ಚಾಗಿ ರೂಪುಗೊಳ್ಳುತ್ತಿಲ್ಲ. ಸಂಗೀತಕ್ಕೆ ಅಪಾರವಾದ ಶಕ್ತಿ ಇದೆ, ಕರೋಕೆಯ ಜೊತೆಗೆ ಸಾಂಪ್ರದಾಯಿಕ ಶೈಲಿಯಲ್ಲಿಯೂ ನಾವು ಸಂಗೀತ ಆಲಿಸಬೇಕು, ಸಂಗೀತ ವಾದ್ಯ ನುಡಿಸುವ ಮನೋಭಾವನೆಯನ್ನು ಯುವಜನತೆ ರೂಡಿಸಿಕೊಳ್ಳಬೇಕಾಗಿರುವುದು ಇಂದು ಅಗತ್ಯವಾಗಿದೆ ಎಂದರು.



ವಿಜಯಪುರದಲ್ಲಿ ನಡೆದ ಯುವಜನೋತ್ಸವ ಸಮಾರಂಭಕ್ಕೆ ಚಾಲನೆ ನೀಡಲಾಯಿತು.

ಯುವಜನರಲ್ಲಿ ಸಾಂಸ್ಕೃತಿಕ ಮನೋಭಾವನೆ, ರಾಷ್ಟ್ರಾಭಿಮಾನ, ಮೊದಲಾದ ಉದಾತ್ತ ಸಂಸ್ಕಾರಗಳನ್ನು ಮೈಗೂಡಿಸುವಲ್ಲಿ ಯುವಜನೋತ್ಸವ ಕಾರ್ಯಕ್ರಮಗಳು ಪೂರಕವಾಗಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಯುವಜನೋತ್ಸವಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಿದ ನಾಗಠಾಣ ಶಾಸಕ ಡಾ.ದೇವಾನಂದ ಚವ್ಹಾಣ ಮಾತನಾಡಿದರು.

> ಯುವಕರು ದೇಶದ ಮಹಾನ್ ಶಕ್ತಿ. ಯುವಜನತೆ ಉತ್ತಮ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ರಾಷ್ಟ್ರದ ಪ್ರಗತಿಗಾಗಿ ಶ್ರಮಿಸಬೇಕು.
>
> – ಡಾ.ದೇವಾನಂದ ಚವ್ಹಾಣ, ಶಾಸಕ

ರಾಷ್ಟ್ರೀಯ ಯುವ ಪ್ರಶಸ್ತಿ ಪುರಸ್ಕೃತರ ಫೆಡರೇಷನ್ ಅಧ್ಯಕ್ಷ ಡಾ.ಜಾವೇದ ಜಮದಾರ, ಪಾಲಿಕೆ ಸದಸ್ಯ ಪ್ರೇಮಾನಂದ ಬಿರಾದಾರ, ರಾಜ್ಯ ಯುವ ಪ್ರಶಸ್ತಿ ಪುರಸ್ಕೃತರಾದ ಅರವಿಂದ ಕೊಪ್ಪ, ಪೋತ, ಸಂತೋಷಕುಮಾರ ನಿಗಡಿ, ಪ್ರಾಚಾರ್ಯ ಡಾ.ಎಸ್.ಜಿ. ಪೂಜಾರಿ, ಪ್ರೊ.ಜಿ.ಆರ್. ಅಂಬಲಿ ಮೊದಲಾದವರು ಉಪಸ್ಥಿತರಿದ್ದರು.

ಯುವ ಸಬಲೀಕರಣ ಇಲಾಖೆ ಸಹಾಯಕ ನಿರ್ದೇಶಕ ಎಸ್.ಜಿ. ಲೋಣಿ ಸ್ವಾಗತಿಸಿದರು. ಡಾ.ಎಸ್.ಟಿ. ಮೇರವಾಡೆ ಕಾರ್ಯಕ್ರಮ ನಿರೂಪಿಸಿದರು. ಎನ್‌ವೈಕೆ ಜಿಲ್ಲಾ ಸಮನ್ವಯಾಧಿಕಾರಿ ಡಿ.ದಯಾನಂದ ವಂದಿಸಿದರು.

Scanned with CamScanner

ಭಾನುವಾರ • ಸೆಪ್ಟೆಂಬರ್ 30, 2018 ಪ್ರಜಾವಾಣಿ

## ಯುವಜನೋತ್ಸವದಲ್ಲಿ ಶಾಸಕ ದೇವಾನಂದ ಸಲಹೆ

# ಜಾನಪದ ಕಲೆ ಉಳಿಸಿ

ಪ್ರಜಾವಾಣಿ ವಾರ್ತೆ

ವಿಜಯಪುರ: ಮುಂದುವರಿದ ತಾಂತ್ರಿಕ ಯುಗದಲ್ಲಿ ನಾಡಿನ ಜಾನಪದ ಕಲೆಯನ್ನು ಉಳಿಸಿ-ಬೆಳೆಸಿಕೊಂಡು ಹೋಗುವಲ್ಲಿ ಯುವಕರ ಪಾತ್ರ ಮಹತ್ವದ್ದಾಗಿದೆ ಎಂದು ಶಾಸಕ ದೇವಾನಂದ ಚವ್ಹಾಣ ಹೇಳಿದರು.

ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದ ಸಭಾಂಗಣದಲ್ಲಿ ಶನಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಯುವಜನೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

'ಜನಪದಕಲೆಯನ್ನುಮುಂದುವರೆಸಿಕೊಂಡು ಹೋಗುವ ನಿಟ್ಟಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಹತ್ತಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಯುವ ಸಮೂಹ ಈ ಕಾರ್ಯಕ್ರಮಗಳನ್ನು ಸದುಪಯೋಗ ಮಾಡಿಕೊಂಡು ನಾಡಿನ ಜನಪದ ಕಲೆಯನ್ನು ಉಳಿಸಿ ಬೆಳೆಸಲು ಮುಂದಾಗಬೇಕು' ಎಂದು ಸಲಹೆ ನೀಡಿದರು.




ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಎಸ್‌.ಬಿ. ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಶನಿವಾರ ನಡೆದ ಜಿಲ್ಲಾ ಮಟ್ಟದ ಯುವಜನೋತ್ಸವವನ್ನು ಶಾಸಕ ದೇವಾನಂದ ಚವ್ಹಾಣ ಉದ್ಘಾಟಿಸಿದರು

ಜಿಲ್ಲಾಧಿಕಾರಿ ಎಸ್.ಬಿ.ಶೆಟ್ಟೆಣ್ಣವರ ಮಾತನಾಡಿ, 'ಯುವಕರು ತಮ್ಮ ಶೈಕ್ಷಣಿಕ ಜೀವನದ ಜೊತೆಯಲ್ಲಿಯೇ ಕಲೆ, ಸಂಸ್ಕೃತಿಯ ಅಭಿರುಚಿಯನ್ನು ಬೆಳೆಸಿಕೊಳ್ಳಬೇಕು. ಇಂದಿನ ಯುವಕರು ತಂತ್ರಜ್ಞಾನ ಆಧರಿತ ಸಂಗೀತದ ಹಾಡುಗಳಿಗೆ ಮೊರೆ ಹೋಗುತ್ತಿದ್ದಾರೆ. ಇದನ್ನು ತಪ್ಪಿಸಲು ಮೂಲ ಸಂಗೀತ ಸಾಧನಗಳೊಂದಿಗೆ ಹಾಡು ಮತ್ತು ನೃತ್ಯಗಳನ್ನು ಪ್ರದರ್ಶಿಸುವ ಕಲೆಯನ್ನು ಅಳವಡಿಸಿಕೊಳ್ಳಬೇಕು' ಎಂದರು.

ಮಹಾನಗರ ಪಾಲಿಕೆ ಸದಸ್ಯ ಪ್ರೇಮಾನಂದ ಬಿರಾದಾರ, ಜಾವೀದ ಜಮಾದಾರ, ಅರವಿಂದ ಕೊಪ್ಪ, ಸಂಜೀವ ಖೋತ, ಸಂತೋಷಕುಮಾರ ನಿಗಡಿ, ಅಡಿವೆಪ್ಪ ಸಾಲಗಲ್, ನಾಗರಾಜ ಲಂಬು, ಡಾ.ಕೆ.ಜಿ.ಪೂಜಾರಿ, ಜಿ.ಆರ್. ಅಂಬಲಿ ಇದ್ದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅಧಿಕಾರಿ ಎಸ್. ಜಿ.ಲೋಣಿ ಸ್ವಾಗತಿಸಿದರು. ನೆಹರೂ ಯುವಕೇಂದ್ರದ ಸಮನ್ವಯಾಧಿಕಾರಿ ದಯಾನಂದ ವಂದಿಸಿದರು.

Scanned with CamScanner

ಸೋಮವಾರ, 1, ಅಕ್ಟೋಬರ್, 2018, ಹುಬ್ಬಳ್ಳಿ

ಸಂಯುಕ್ತ ಕರ್ನಾಟಕ ವಿಜಯಪುರ

## ಜಿಲ್ಲಾ ಯುವಜನೋತ್ಸವದಲ್ಲಿ ಬಹುಮಾನಿತರಿಗೆ ಪಾರಿತೋಷಕ ವಿತರಣೆ

# ಸಾಂಸ್ಕೃತಿಕ ಕಲೆಗಳು ಬದುಕಿನ ಅಮೂಲ್ಯ ಸೂತ್ರಗಳು

ಸಂ.ಕ.ಸಮಾಚಾರ, ವಿಜಯಪುರ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಯುವ ಸಬಲೀಕರಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಜರುಗಿದ ಜಿಲ್ಲಾ ಮಟ್ಟದ ಯುವಜನೋತ್ಸವದಲ್ಲಿ ವಿಜೇತರಿಗೆ ಪಾರಿತೋಷಕ ವಿತರಿಸಲಾಯಿತು.

ಪಾರಿತೋಷಕ ವಿತರಿಸಿದ ಯುವ ಪ್ರಶಸ್ತಿ ಪುರಸ್ಕೃತ ಫೆಡರೇಷನ್ ಅಧ್ಯಕ್ಷ ಡಾ.ಜಾವೇದ ಜಮಾದಾರ ಮಾತನಾಡಿ, ಆಧುನಿಕ ಯುಗದ ಭರಾಟೆಯಲ್ಲಿ ಕಣ್ಮರೆಯಾಗುತ್ತಿರುವ ಜಾನಪದ ಕಲೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಯುವಜನತೆ ಸಂಕಲ್ಪ ಮಾಡಬೇಕು. ಸಾಂಸ್ಕೃತಿಕ ಕಲೆಗಳು ಯಶಸ್ವಿ ಬದುಕಿನ ಅಮೂಲ್ಯ ಸೂತ್ರಗಳು ಎಂದರು. ಪಾಶ್ಚಾತ್ಯ ಸಂಸ್ಕೃತಿಯ ಅತಿಯಾದ ವ್ಯಾಮೋಹದಿಂದಾಗಿ ಯುವಜನತೆ ನಮ್ಮ ಸಂಸ್ಕೃತಿಯ ಬಗ್ಗೆ ಒಲವು ಬೆಳೆಸಿಕೊಳ್ಳುತ್ತಿಲ್ಲ. ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಕರಣೆ ಮಾಡುವುದಕ್ಕಿಂತ ನಮ್ಮ ನೆಲದ ಭವ್ಯ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.



ವಿಜಯಪುರದಲ್ಲಿ ನಡೆದ ಜಿಲ್ಲಾ ಮಟ್ಟದ ಯುವಜನೋತ್ಸವದಲ್ಲಿ ವಿಜೇತರಿಗೆ ಪಾರಿತೋಷಕ ವಿತರಿಸಲಾಯಿತು.

**ಬಹುಮಾನಿತರು:**

ಜಾನಪದ ನೃತ್ಯದಲ್ಲಿ ಶ್ರೀ ಬಂಗಾರಮ್ಮ ಸಜ್ಜನ ಮಹಿಳಾ ಮಹಾವಿದ್ಯಾಲಯ ಪ್ರಥಮ ಸ್ಥಾನ, ಬಂಗಾರಮ್ಮ ಮಹಿಳಾ ಮಹಾವಿದ್ಯಾಲಯ ದ್ವಿತೀಯ ಸ್ಥಾನ, ಜಾನಪದ ಗೀತೆ ಗಾಯನ ಸ್ಪರ್ಧೆಯಲ್ಲಿ ಬಿ.ಎಲ್.ಡಿ.ಇ. ಇಂಜಿನಿಯರಿಂಗ್ ಕಾಲೇಜ ತಂಡ ಪ್ರಥಮ ಸ್ಥಾನ, ಬಂಗಾರಮ್ಮ ಸಜ್ಜನ ಮಹಿಳಾ ಮಹಾವಿದ್ಯಾಲಯ ದ್ವಿತೀಯ ಸ್ಥಾನ, ಏಕಾಂಗ ನಾಟಕ ಬಿ.ಎಲ್.ಡಿ.ಇ. ಇಂಜಿನಿಯರಿಂಗ್ ಕಾಲೇಜ ತಂಡ ಪ್ರಥಮ ಸ್ಥಾನ, ಎಸ್.ಬಿ. ಆರ್ಟ್ಸ ಮತ್ತು ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯ ದ್ವಿತೀಯ, ಶಾಸ್ತ್ರೀಯ ಗಾಯನ (ಕರ್ನಾಟಕಿ) ನರೇಂದ್ರ ಗಾಡಗೀಳ ಪ್ರಥಮ ಸ್ಥಾನ, ಶ್ವೇತಾ ದ್ವಿತೀಯ ಸ್ಥಾನ, ಶಾಸ್ತ್ರೀಯ ಗಾಯನ (ಹಿಂದೂಸ್ತಾನಿ) ಮಹಿಳಾ ವಿಶ್ವವಿದ್ಯಾಲಯದ ಸರಸ್ವತಿ ಸಬರದ ಪ್ರಥಮ, ದರ್ಶನ ದ್ವಿತೀಯ, ಶಾಸ್ತ್ರೀಯ ವಾದ್ಯ ತಬಲಾ ಕಾಶೀನಾಥ ಗಾಯಕವಾಡ ಪ್ರಥಮ, ಶ್ರೀನಿಧಿ ದ್ವಿತೀಯ, ಸಮೀತ ತೃತೀಯ, ಕೊಳಲು ವಾದನ ಕೃತೀಕಾ ಜಂಗಿನಮಠ ಪ್ರಥಮ, ಹಾರ್ಮೋನಿಯಂ ಅನುಷಾ ಪ್ರಥಮ, ಸೌಂದರ್ಯ ಒಡೆಯರ ದ್ವಿತೀಯ, ಗಿಟಾರ್ ಇಬ್ರಾಹಿಂ ಪ್ರಥಮ, ರಾಹುಲ ದ್ವಿತೀಯ, ಸೃಷ್ಟಿ ತೃತೀಯ, ಶಾಸ್ತ್ರೀಯ ನೃತ್ಯ ಭರತನಾಟ್ಯ ಪೂಜಾ ಸರಸಟ್ಟಿ ಪ್ರಥಮ, ಲಕ್ಷ್ಮೀ ತೇರದಾಳ ದ್ವಿತೀಯ, ಸುಕನ್ಯಾ ತೃತೀಯ, ಆಶುಭಾಷಣ ಬಿ.ಎಲ್.ಡಿ.ಇ. ಇಂಜಿನಿಯರಿಂಗ್ ಕಾಲೇಜಿನ ಸಯೀದಾ ಖಾದ್ರಿ ಪ್ರಥಮ, ಕಿರಣಕುಮಾರ ಹಿರೇಮಠ ದ್ವಿತೀಯ, ಅಶ್ವಿನಿ ಉಪ್ಪಾರ ತೃತೀಯ ಸ್ಥಾನ ಪಡೆದುಕೊಂಡರು.

ಪ್ರಾಚಾರ್ಯ ಡಾ.ಎಸ್.ಕೆ. ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಅಧಿಕಾರಿ ಎಸ್.ಜಿ. ಲೋಣಿ, ರಾಜ್ಯ ಯುವಪ್ರಶಸ್ತಿ ಪುರಸ್ಕೃತ ಅರವಿಂದ ಕೊಪ್ಪಾ, ಎನ್.ಎಸ್.ಎಸ್. ಅಧಿಕಾರಿ ಜಿ.ಆರ್. ಅಂಬಲಿ, ನಿರ್ಣಾಯಕರಾದ ಶಶಿಕಲಾ ಕುಲ್ಲೊಳ್ಳಿ, ಸುನಂದಾ ಘಾಟಗೆ, ಪಲ್ಲವಿ ವಾಗದಂಡೆ, ಶ್ರೀಮತಿ ಪಾಟೀಲ, ಸುಭಾಸ ಕನ್ನೂರ ಉಪಸ್ಥಿತರಿದ್ದರು.

Scanned with CamScanner

ಸೋಮವಾರ
1 ಅಕ್ಟೋಬರ್ 2018
ಹೊಸ ದಿಗಂತ

# ಜನಪದ ಕಲೆ ಉಳಿಸಿ: ಶಾಸಕ ದೇವಾನಂದ

• ದಿಗಂತ ವರದಿ:ವಿಜಯಪುರ




ವಿಜಯಪುರ ನಗರದ ಎಸ್.ಬಿ. ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದ ಸಭಾಂಗಣದಲ್ಲಿ ಆಯೋಜಿಸಿದ ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮವನ್ನು ಶಾಸಕ ದೇವಾನಂದ ಚವ್ಹಾಣ್ ಉದ್ಘಾಟಿಸಿದರು

ಇಂದಿನ ಮುಂದುವರೆದ ತಾಂತ್ರಿಕ ಯುಗದಲ್ಲಿ ನಮ್ಮ ನಾಡಿನ ಜನಪದ ಕಲೆ ಉಳಿಸಿ-ಬೆಳೆಸಿಕೊಂಡು ಹೋಗುವಲ್ಲಿ ಯುವಜನರ ಪಾತ್ರ ಮಹತ್ವದ್ದಾಗಿದೆ ಎಂದು ನಾಗಠಾಣ ಕ್ಷೇತ್ರದ ಶಾಸಕ ದೇವಾನಂದ ಚವ್ಹಾಣ ಅವರು ಹೇಳಿದರು.

ನಗರದ ಎಸ್.ಬಿ. ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದ ಸಭಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಯುವಜನೋತ್ಸವ ಉದ್ಘಾಟಿಸಿ ಮಾತನಾಡಿ, ಜನಪದ ಕಲೆ ಮುಂದುವರೆಸಿಕೊಂಡು ಹೋಗುವ ನಿಟ್ಟಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟದ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಇಂತಹ ಕಾರ್ಯಕ್ರಮಗಳ ಸದುಪಯೋಗ ಪಡೆದುಕೊಂಡು ಯುವಕರು ನಮ್ಮ ನಾಡಿನ ಜನಪದ ಕಲೆಯನ್ನು ಬೆಳೆಸಲು ಮುಂದಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಎಸ್.ಬಿ.ಶೆಟ್ಟೆಣ್ಣವರ ಮಾತನಾಡಿ, ಯುವ ಜನರು ತಮ್ಮ ಶೈಕ್ಷಣಿಕ ಜೀವನದ ಜೊತೆಯಲ್ಲಿಯೇ ಕಲೆ, ಸಂಸ್ಕೃತಿಯ ಅಭಿರುಚಿ-ಹವ್ಯಾಸ ಬೆಳೆಸಿಕೊಳ್ಳಬೇಕು. ಇಂದಿನ ಯುವಜನರು ಕ್ಯಾಸೆಟ್ ಹಾಗೂ ಸಿಡಿಗಳ ಮೂಲಕ ಸಂಗೀತದ ಹಾಡುಗಳಿಗೆ ಮೊರೆ ಹೋಗುತ್ತಿದ್ದಾರೆ. ಇದನ್ನು ತಪ್ಪಿಸಲು ಮೂಲ ಸಂಗೀತ ಸಾಧನಗಳೊಂದಿಗೆ ಹಾಡು ಮತ್ತು ನೃತ್ಯಗಳನ್ನು ಪ್ರದರ್ಶಿಸುವ ಕಲೆಯನ್ನು ಅಳವಡಿಸಿಕೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯ ಪ್ರೇಮಾನಂದ ಬಿರಾದಾರ, ರಾಷ್ಟ್ರ ಯುವ ಪ್ರಶಸ್ತಿ ವಿಜೇತ ಜಾವೀದ ಜಮಾದಾರ, ರಾಜ್ಯ ಯುವ ಪ್ರಶಸ್ತಿ ಪುರಸ್ಕೃತ ಅರವಿಂದ ಕೊಪ್ಪ, ಸಂಜೀವ ಜೋಶಿ, ಸಂತೋಷಕುಮಾರ ನಿಗಡಿ, ಎಸ್.ಸಿ.ಎಸ್ಟಿ ದೌರ್ಜನ್ಯ ತಡೆ ಸಲಹಾ ಸಮಿತಿ ಸದಸ್ಯ ಅಡಿವೆಪ್ಪ ಸಾಲಗಲ್, ನಾಗರಾಜ ಲಂಬು, ಪ್ರಾಚಾರ್ಯ ಡಾ.ಕೆ.ಜಿ.ಪೂಜಾರಿ, ಎನ್.ಎಸ್.ಎಸ್.ಅಧಿಕಾರಿ ಜಿ.ಆರ್.ಅಂಬಲಿ ಉಪಸ್ಥಿತರಿದ್ದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅಧಿಕಾರಿ ಎಸ್.ಜಿ.ಲೋಣಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ನೆಹರು ಯುವಕೇಂದ್ರದ ಸಮನ್ವಯಾಧಿಕಾರಿ ದಯಾನಂದ ವಂದಿಸಿದರು.

Scanned with CamScanner

ವಿಜಯ ಕರ್ನಾಟಕ

01 - ಅಕ್ಟೋಬರ್ 2018

# ಜಾನಪದ ಕಲೆ, ಸಂಸ್ಕೃತಿ ಉಳಿಸಿ

**ವಿಕ ಸುದ್ದಿಲೋಕ** ವಿಜಯಪುರ

ಸಾಂಸ್ಕೃತಿಕ ಕಲೆಗಳು ಯಶಸ್ವಿ ಬದುಕಿನ ಅಮೂಲ್ಯ ಸೂತ್ರಗಳು. ಆಧುನಿಕ ಯುಗದ ಭರಾಟೆಯಲ್ಲಿ ಕಣ್ಮರೆಯಾಗುತ್ತಿರುವ ಜಾನಪದ ಕಲೆ ಹಾಗೂ ಸಂಸ್ಕೃತಿಯನ್ನು ಉಳಿಸಿ, ಬೆಳೆಸಲು ಯುವಜನತೆ ಸಂಕಲ್ಪ ಮಾಡಬೇಕು ಎಂದು ರಾಷ್ಟ್ರಪ್ರಶಸ್ತಿ ಪುರಸ್ಕೃತ ಫೆಡರೇಶನ್ ಅಧ್ಯಕ್ಷ ಜಾವೀದ್ ಜಮಾದಾರ ಹೇಳಿದರು.

ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಆರ್ಟ್ಸ್ ಹಾಗೂ ಕೆಸಿಪಿ ಸೈನ್ಸ್ ಕಾಲೇಜ್ ಸಭಾಭವನದಲ್ಲಿ ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಶ್ರಯದಲ್ಲಿ ನಡೆದ ಜಿಲ್ಲಾಮಟ್ಟದ ಯುವಜನೋತ್ಸವ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಪಾಶ್ಚಾತ್ಯ ಸಂಸ್ಕೃತಿಯ ವ್ಯಾಮೋಹದಿಂದಾಗಿ ಯುವಜನತೆ ನಮ್ಮ ಸಂಸ್ಕೃತಿಯ ಬಗ್ಗೆ ಒಲವು ಬೆಳೆಸಿಕೊಳ್ಳುತ್ತಿಲ್ಲ, ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆ ಮಾಡುವುದಕ್ಕಿಂತ ನಮ್ಮ ನೆಲದ ಭವ್ಯ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಬೇಕು ಎಂದರು.

ಪ್ರಾಚಾರ್ಯ ಎಸ್.ಕೆ.ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಯುವ ಪ್ರಶಸ್ತಿ ಪುರಸ್ಕೃತ ಅರವಿಂದ ಕೊಪ್ಪ, ಎನ್ನೆಸ್ಸೆಸ್ ಅಧಿಕಾರಿ ಜಿ. ಆರ್.ಅಂಬಲಿ, ನಿರ್ಣಾಯಕಿ ಶಶಿಕಲಾ ಕೊನ್ನೊಳ್ಳಿ, ಸುನಂದಾ ಘಾಟಗೆ, ಪಲ್ಲವಿ ವಾಗದಂಡೆ, ಸುಭಾಸ ಕನ್ನೂರ ಇದ್ದರು.

**ಫಲಿತಾಂಶ:** ಜಿಲ್ಲಾಮಟ್ಟದ ಯುವಜನೋತ್ಸವದ ನಾನಾ ಸ್ಪರ್ಧೆಗಳು ನಡೆದವು. ಜಾನಪದ ನೃತ್ಯ-ಬಂಗಾರಮ್ಮ ಸಜ್ಜನ ಮಹಿಳಾ ಕಾಲೇಜ್ ತಂಡಗಳು ಪ್ರಥಮ ಮತ್ತು ದ್ವಿತೀಯ, ಜಾನಪದ ಗೀತೆ-ಬಿಎಲ್‌ಡಿಇ ಎಂಜಿನಿಯರಿಂಗ್ ಕಾಲೇಜ್ ತಂಡ ಪ್ರಥಮ, ಬಂಗಾರಮ್ಮ ಸಜ್ಜನ ಮಹಿಳಾ ಕಾಲೇಜ್ ದ್ವಿತೀಯ, ಏಕಾಂಗ ನಾಟಕ-ಬಿಎಲ್‌ಡಿಇ ಎಂಜಿನಿಯರಿಂಗ್ ಕಾಲೇಜ್ ತಂಡ ಪ್ರಥಮ, ಎಸ್‌ಬಿ ಆರ್ಟ್ಸ್ ಮತ್ತು ಕೆಸಿಪಿ ಸೈನ್ಸ್ ಕಾಲೇಜ್ ದ್ವಿತೀಯ, ಶಾಸ್ತ್ರೀಯ ಗಾಯನ (ಕರ್ನಾಟಕಿ)-ನರೇಂದ್ರ ಗಾಡಗೀಳ ಪ್ರಥಮ, ಶ್ವೇತಾ ದ್ವಿತೀಯ, ಶಾಸ್ತ್ರೀಯ ಗಾಯನ (ಹಿಂದೂಸ್ತಾನಿ) ಮಹಿಳಾ ವಿವಿಯ ಸರಸ್ವತಿ ಸಬರದ ಪ್ರಥಮ, ದರ್ಶನ ದ್ವಿತೀಯ, ಶಾಸ್ತ್ರೀಯ ವಾದ್ಯ ತಬಲಾ- ಕಾಶಿನಾಥ ಗಾಯಕವಾಡ ಪ್ರಥಮ, ಶ್ರೀನಿಧಿ ದ್ವಿತೀಯ, ಸಮೀತ ತೃತೀಯ, ಕೊಳಲು ವಾದನ-ಕೃತಿಕಾ ಜಂಗಿನಮಠ ಪ್ರಥಮ, ಹಾರ್ಮೋನಿಯಂ-ಅನುಷಾ ಪ್ರಥಮ, ಸೌಂದರ್ಯ ಒಡೆಯರ ದ್ವಿತೀಯ, ಗಿಟಾರ್ -ಇಬ್ರಾಹಿಂ ಪ್ರಥಮ, ರಾಹುಲ ದ್ವಿತೀಯ, ಸೃಷ್ಟಿ ತೃತೀಯ, ಶಾಸ್ತ್ರೀಯ ನೃತ್ಯ ಭರತನಾಟ್ಯ-ಪೂಜಾ ಸರಸಟ್ಟಿ ಪ್ರಥಮ, ಲಕ್ಷ್ಮಿ ತೇರದಾಳ ದ್ವಿತೀಯ, ಸುಕನ್ಯಾ ತೃತೀಯ, ಆಶುಭಾಷಣ ಬಿ.ಎಲ್.ಡಿ.ಇ. ಎಂಜಿನಿಯರಿಂಗ್ ಕಾಲೇಜ್‌ನ ಸಯೀದಾ ಖಾದ್ರಿ ಪ್ರಥಮ, ಕಿರಣಕುಮಾರ ಹಿರೇಮಠ ದ್ವಿತೀಯ, ಅಶ್ವಿನಿ ಉಪ್ಪಾರ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.





ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಆರ್ಟ್ಸ್ ಹಾಗೂ ಕೆಸಿಪಿ ಸೈನ್ಸ್ ಕಾಲೇಜ್‌ನಲ್ಲಿ ನಡೆದ ಜಿಲ್ಲಾಮಟ್ಟದ ಯುವಜನೋತ್ಸವದ ಸಮಾರೋಪ ಸಮಾರಂಭದಲ್ಲಿ ನಾನಾ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಜಿಲ್ಲಾಮಟ್ಟದ ಯುವಜನೋತ್ಸವ ಸಮಾರೋಪ ಸಮಾರಂಭ

Scanned with CamScanner

4 ಅಕ್ಟೋಬರ್ 2018

# ವಿದ್ಯಾರ್ಥಿಗಳಿಗೆ ಚೆಕ್ ವಿತರಣೆ




**ವಿಜಯಪುರ ಎಸ್‌ಬಿ ಆರ್ಟ್ಸ್ ಮತ್ತು ಕೆಸಿಪಿ ಸೈನ್ಸ್ ಕಾಲೇಜ್‌ನಲ್ಲಿ ವಿದ್ಯಾ ಪೋಷಕ ಸಂಸ್ಥೆಯು ಬಡ ವಿದ್ಯಾರ್ಥಿಗಳಿಗೆ ಕೊಡ ಮಾಡಿದ ಆರ್ಥಿಕ ಸಹಾಯವನ್ನು ಪ್ರಾಚಾರ್ಯ ಡಾ. ಕೆ.ಜಿ. ಪೂಜಾರಿ ವಿತರಿಸಿದರು.**

**ವಿಜಯಪುರ:** ವಿದ್ಯಾಪೋಷಕ ಸಂಸ್ಥೆ 2018-19ನೇ ಸಾಲಿನಲ್ಲಿ ವಿಜಯಪುರ ಹಾಗೂ ಬಾಗಲಕೋಟ ಜಿಲ್ಲೆಯ 130 ಬಡ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಅಂದಾಜು 8.30 ಲಕ್ಷ ರೂ. ಧನಸಹಾಯವನ್ನು ನಗರದ ಎಸ್‌ಬಿ ಆರ್ಟ್ಸ್ ಮತ್ತು ಕೆಸಿಪಿ ವಿಜ್ಞಾನ ಕಾಲೇಜ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ನಾನಾ ವಿದ್ಯಾರ್ಥಿಗಳಿಗೆ ಚೆಕ್ ಮೂಲಕ ವಿತರಿಸಿತು.

ಕೆನರಾ ಬ್ಯಾಂಕ್ ಹಿರಿಯ ವ್ಯವಸ್ಥಾಪಕ ಅಶೋಕ ಟಿ. ಗಣಪುರಕರ ಮಾತನಾಡಿ, ವಿದ್ಯಾಪೋಷಕ ಸಂಸ್ಥೆಯ ಧನ ಸಹಾಯ ಪಡೆದ ವಿದ್ಯಾರ್ಥಿಗಳೆಲ್ಲ ಚೆನ್ನಾಗಿ ಅಭ್ಯಾಸ ಮಾಡುವ ಮೂಲಕ ಜ್ಞಾನದ ಮೂರ್ತಿಗಳಾಗಬೇಕು. ತನ್ಮೂಲಕ ಸಂಸ್ಥೆ ನೀಡಿದ ಆರ್ಥಿಕ ಸಹಾಯವನ್ನು ಭವಿಷ್ಯ ರೂಪಿಸಿಕೊಳ್ಳುವ ಮೂಲಕ ಸಾಕಾರಗೊಳಿಸಿಕೊಳ್ಳಬೇಕೆಂದರು.

ಕಾಲೇಜ್ ಪ್ರಾಚಾರ್ಯ ಡಾ. ಕೆ.ಜಿ. ಪೂಜಾರಿ ಮಾತನಾಡಿ, ಹಲವು ವಿಭಿನ್ನ ರೀತಿಯಲ್ಲಿ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿರುವ ಏಕೈಕ ಸಂಸ್ಥೆ ವಿದ್ಯಾಪೋಷಕವಾಗಿದೆ ಎಂದು ಬಣ್ಣಿಸಿದರು.

ನೂತನ ಚಾಣಕ್ಯ ಕರಿಯರ್ ಅಕಾಡೆಮಿಯ ಬಿ.ಡಿ ಪಾಟೀಲ ಮಾತನಾಡಿ, ಮುಂದಿನ ದಿನಗಳಲ್ಲಿ ವಿದ್ಯಾಪೋಷಕ ಸಂಸ್ಥೆಯಿಂದ ಬರುವ ಮೂರು ಬಡ ವಿದ್ಯಾರ್ಥಿಗಳಿಗೆ ತಮ್ಮ ಸಂಸ್ಥೆಯ ವತಿಯಿಂದ ಉಚಿತ ತರಬೇತಿ ನೀಡುವುದಾಗಿ ತಿಳಿಸಿದರು. ವಿದ್ಯಾಪೋಷಕದ ವಿದ್ಯಾರ್ಥಿಗಳಾದ ಸಿದರಾಯ ಕೋಳಿ, ದಾನೇಶ್ವರಿ ಮಳಿಮಠ ಹಾಗೂ ಬೆಬಿ ಗಣಾಚಾರಿ ಹಾಗೂ ವಿದ್ಯಾಪೋಷಕ ಸಂಸ್ಥೆಯ ಸ್ವಯಂ ಸೇವಕ ಎಸ್. ಎಂ. ಚೊಳಕೆ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ದಾನಿಗಳಾದ ಸುಭಾಷ ತೋಸ್ನಿವಾಲ, ಮಲ್ಲಿಕಾರ್ಜುನ ಗಂಗಾಧರ, ಗೋವಿಂದರಾಜ ಮಾದಮಶೆಟ್ಟಿ, ರಮೇಶ ತೋಸ್ನಿವಾಲ, ಅಶೋಕ ತೋಸ್ನಿವಾಲ, ಪ್ರಿಯಾ ಕುಲಕರ್ಣಿ, ಸೌಮ್ಯಾ ಪಾಟೀಲ ಇದ್ದರು.

ಮಾನಂದಾ ಯಳಮೇಲಿ ಸ್ವಾಗತಿಸಿ, ಪರಿಚಯಿಸಿದರು. ವಿದ್ಯಾಪೋಷಕ ಸಂಸ್ಥೆಯ ಸಿಇಒ ಸಿ. ಉಮೇಶ ಪ್ರಾಸ್ತಾವಿಕವಾಗಿ ಮಾತನಾಡಿದರು. ಸುರೇಖಾ ಗಿರಿಗೌಡರ ನಿರೂಪಿಸಿದರು. ಸ್ವಯಂ ಸೇವಕ ಪವನ ಹದರಿ ವಂದಿಸಿದರು.

Scanned with CamScanner